# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಡಿಸೆಂಬರ್ 14, 2020

ಸಂಪುಟ : 47 ಸಂಚಿಕೆ : 224 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




## ಯರಗುಂಟೆ : ಸಂಭ್ರಮದ ಅಜ್ಜಯ್ಯನ ತೇರು

ದಾವಣಗೆರೆ, ಡಿ.13- ಮಹಿಳೆಯರು ತಮ್ಮ ಮನಸ್ಸಿನಲ್ಲಿರುವ ಆಸೆಗಳೊಂದಿಗೆ ಕೊರೊನಾ ಹೊಡೆದೋಡಿಸು ಎಂದು ಶ್ರೀ ಕರಿಬಸವೇಶ್ವರ ಸ್ವಾಮಿಯಲ್ಲಿ ಪ್ರಾರ್ಥಿಸಿ ರಥವನ್ನು ಎಳೆಯಿರಿ. ಮುಂದಿನ ವರ್ಷ ಇನ್ನೂ ಸಂಭ್ರಮದಿಂದ ರಥೋತ್ಸವ ಆಚರಿಸೋಣ ಎಂದು ಯರಗುಂಟೆಯ ಶ್ರೀಮಠದ ಶ್ರೀ ಪರಮೇಶ್ವರ ಸ್ವಾಮೀಜಿ ತಿಳಿಸಿದರು.

ನಗರದ ಹೊರವಲಯದ ಯರಗುಂಟೆಯಲ್ಲಿ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಗದ್ದುಗೆ ಮಠದಿಂದ ಇಂದು ಆಯೋಜಿಸಿದ್ದ ಮಹಿಳೆಯರಿಂದ ಶ್ರೀ ಗುರು ಕರಿಬಸವೇಶ್ವರ ಸ್ವಾಮಿಯ ರಥೋತ್ಸವ ಎಳೆಯುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು,

**ತಾಯಿಯ, ದೇವತೆಯ ಋಣ ತೀರಿಸಬೇಕು: ಶ್ರೀ ಪರಮೇಶ್ವರ ಸ್ವಾಮೀಜಿ ಆಶಯ**

ನಮ್ಮನ್ನು 9 ತಿಂಗಳು ಹೆತ್ತು ಹೊತ್ತು ಬೆಳೆಸಿದ ತಾಯಿಗೆ ಕೊನೆವರೆಗೆ ಪ್ರೀತಿಯಿಂದ ಸಲಹುವ ಮೂಲಕ ಋಣವನ್ನು ತೀರಿಸಬೇಕು ಎಂದು ಹಿತ ನುಡಿದರು.

ಮಹಿಳೆಯರಿಗೆ ಸ್ವತಂತ್ರವಾದ ಹಕ್ಕನ್ನು ಕೊಡಬೇಕು. ಗಂಡು ಮಕ್ಕಳಲ್ಲಿ ಇರುವಂತ ಸರಿಸಮಾನವಾದ ಶಕ್ತಿ ಯಾರಲ್ಲಿ ಇದೆ ಎಂದರೆ ಅದು ಮಹಿಳೆಯರಲ್ಲಿ, ತಾಯಂದಿರಲ್ಲಿ. ಯಾರಾದರೂ ಜಗಳ ಮಾಡುತ್ತಿದ್ದರೆ ತಾಯಿ ಸಮಾಧಾನ ಮಾಡಿ ಬಿಡಿಸುತ್ತಾಳೆ. ಆದರೆ ಗಂಡು ಮಕ್ಕಳಲ್ಲಿ ಸಮಾಧಾನವೇ ಇಲ್ಲ. ಆ ತಾಯಿ ಇಡೀ ಭೂ ಮಂಡಲವನ್ನು ಶಾಂತ ರೀತಿಯಾಗಿ ಕಾಪಾಡುತ್ತಿದ್ದಾಳೆ. ಹೆಣ್ಣಿಗೆ ಗೌರವ ನೀಡಬೇಕು ಎಂದು ಶ್ರೀಗಳು ಕರೆ ನೀಡಿದರು.

ನಮ್ಮ ದೇಹವನ್ನು ತಾಯಿಯ ಪಾದಕ್ಕೆ ಮೀಸಲಿಟ್ಟಾಗ ಮಾತ್ರ ತಾಯಿಯ, ದೇವತೆಯ ಋಣ ತೀರಿಸಲು ಸಾಧ್ಯ. ಮೂಢ ನಂಬಿಕೆಗಳನ್ನು ದೂರ ಮಾಡಿದ ಮಹಾನ್ ಶರಣರು ಎಂದರೆ ಕರಿಬಸವೇಶ್ವರರು. ತಾಯಿ ತಾನು ಊಟ ಮಾಡದಿದ್ದರೂ ಮಗನಿಗಾಗಿ ಕಾಯುತ್ತಾಳೆ ಎಂದು ಹೇಳಿದರು.

ಕಳೆದ 3 ವರ್ಷಗಳಿಂದ (3ನೇ ಪುಟಕ್ಕೆ)

# ಸಂಧಾನಕ್ಕೆ ಒಪ್ಪಿ ನಂತರ ಉಲ್ಟಾ ಆದ ಸಾರಿಗೆ ನೌಕರರು

## ಇಂದಿನಿಂದ ಬಸ್ ಸಂಚಾರಕ್ಕೆ ಬಂದೋಬಸ್ತ್ ಎಂದ ಸಚಿವರು

ಬೆಂಗಳೂರು, ಡಿ. 13 – ಸಾರಿಗೆ ಮುಷ್ಕರಕ್ಕೆ ಸಂಬಂಧಿಸಿದಂತೆ ಸರ್ಕಾರದ ಜೊತೆ ನಡೆಸಲಾದ ಮಾತುಕತೆ ಯಶಸ್ವಿಯಾಗಿದೆ ಎಂದು ಹೇಳಿದ್ದ ನೌಕರರ ಸಂಘದ ಅಧ್ಯಕ್ಷ ಚಂದ್ರು, ನಂತರ ಉಲ್ಟಾ ಹೊಡೆದ ಕಾರಣದಿಂದಾಗಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ವಿಕಾಸಸೌಧದಲ್ಲಿ ಸಚಿವರಾದ ಬಸವರಾಜ ಬೊಮ್ಮಾಯಿ, ಆರ್. ಅಶೋಕ್ ಮತ್ತು ಸಾರಿಗೆ ಸಚಿವ ಲಕ್ಷ್ಮಣ್ ಸವದಿ ಜೊತೆ ಸಾರಿಗೆ ಒಕ್ಕೂಟದ ಸದಸ್ಯರು ಮಾತುಕತೆ ನಡೆಸಿದ್ದರು. ನಂತರ ಮಾತನಾಡಿದ್ದ ಚಂದ್ರು, ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಲು ಒಪ್ಪಿದೆ ಎಂದಿದ್ದರು.

ಆನಂತರದಲ್ಲಿ ಮೆಜೆಸ್ಟಿಕ್‌ನಿಂದ ಹಲವಾರು ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಸಂಚಾರವೂ ಆರಂಭವಾಗಿತ್ತು. ಆದರೆ, ಫ್ರೀಡಂ ಪಾರ್ಕ್‌ನಲ್ಲಿ ನೌಕರರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ತೆರಳಿದ ನಂತರ ಚಂದ್ರು ಉಲ್ಟಾ ಹೊಡೆದಿದ್ದು, ಮುಷ್ಕರ ಮುಂದುವರೆಸುವುದಾಗಿ ಹೇಳಿದ್ದಾರೆ. ಅಲ್ಲದೇ ಸರ್ಕಾರದ ಜೊತೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಬೇಕು ಎಂದೂ ಹೇಳಿದ್ದಾರೆ. ಸಾರಿಗೆ ಸಿಬ್ಬಂದಿಯನ್ನು ಸರ್ಕಾರಿ ನೌಕರರಾಗಿ ಪರಿಗಣಿಸುವ ಬೇಡಿಕೆ ಹೊರತು ಪಡಿಸಿ ಉಳಿದ ಎಲ್ಲ ಬೇಡಿಕೆಗಳಿಗೆ ಸರ್ಕಾರ ಒಪ್ಪಿಕೊಂಡಿತ್ತು.

ಈ ಬೆಳವಣಿಗೆ ಸಾರಿಗೆ ಒಕ್ಕೂಟದಲ್ಲಿ ಒಡಕಿಗೂ ಕಾರಣವಾಗಿದೆ. ಅನಂತ ಸುಬ್ಬರಾವ್ ನೇತೃತ್ವದ ನೌಕರರ ಫೆಡರೇಷನ್, ಸರ್ಕಾರದ ಜೊತೆಗಿನ ಮಾತುಕತೆ ಯಶಸ್ವಿಯಾಗಿದೆ. ನಾಳೆಯಿಂದಲೇ ಕೆಲಸಕ್ಕೆ ನೌಕರರು ಬರಲಿದ್ದಾರೆ ಎಂದು ತಿಳಿಸಿದೆ.

ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಜೊತೆಗಿನ ತಂಡದ ಮುಖಂಡರು ನಮ್ಮ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಇಂತಹ ಮಾತುಗಳನ್ನು ಸಹಿಸುವುದಿಲ್ಲ ಎಂದೂ ಸಹ ಫೆಡರೇಷನ್ ಹೇಳಿದೆ.

ಕೆಎಸ್.ಆರ್.ಟಿ.ಸಿ.ಯ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಕೆಲಸಕ್ಕೆ ಹಾಜರಾಗಲು ಸಮ್ಮತಿಸಿದೆ. ಹೀಗಾಗಿ ಫೆಡರೇಷನ್ ನೌಕರರು ಕರ್ತವ್ಯಕ್ಕೆ ಹಾಜರಾಗಬೇಕೆಂದು ತಿಳಿಸಲಾಗಿದೆ.

ನೌಕರರ ಒಕ್ಕೂಟದ ಅಧ್ಯಕ್ಷ ಚಂದ್ರು ಉಲ್ಟಾ ಹೊಡೆದಿರುವ ಬಗ್ಗೆ ಕಿಡಿ ಕಾರಿರುವ ಗೃಹ ಸಚಿವ ಬಸವರಾಜ ಬೊಮ್ಮಾಯಿ, 'ಡಬಲ್ ಗೇಮ್ ನಾಯಕತ್ವ'ದಿಂದ ನಿಗಮಕ್ಕೆ, ಸಾರಿಗೆ ನೌಕರರಿಗೆ ಒಳ್ಳೆಯದಾಗುವುದಿಲ್ಲ ಎಂದಿದ್ದಾರೆ.

ನಾಳೆ ಬಸ್‌ಗಳು ಕಾರ್ಯ ನಿರ್ವಹಿಸಲಿವೆ. ಖಾಸಗಿ ಬಸ್‌ಗಳೂ ಸಹ ಓಡಾಡಲಿವೆ ಎಂದಿರುವ ಸಾರಿಗೆ ಸಚಿವ ಲಕ್ಷ್ಮಣ ಸವದಿ, ಬಸ್ ಸಂಚಾರಕ್ಕೆ ಅಡ್ಡಿಪಡಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಕಂದಾಯ ಸಚಿವ ಆರ್. ಅಶೋಕ್ ಹೇಳಿಕೆ ನೀಡಿದ್ದು, ಕೊರೊನಾ ಸಂದರ್ಭದಲ್ಲಿ ಮಾನವೀಯತೆ ಇರುವ ಯಾರೂ ಮುಷ್ಕರಕ್ಕೆ ಪ್ರಚೋದನೆ ನೀಡುವುದಿಲ್ಲ ಎಂದು ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಕಿಡಿ ಕಾರಿದ್ದಾರೆ.

ಚಂದ್ರಶೇಖರ್ ಬಣದ ಜೊತೆ ಮಾತನಾಡಿಲ್ಲ ಎಂಬ ಆಕ್ಷೇಪವನ್ನು (2ನೇ ಪುಟಕ್ಕೆ)

**ಕಲ್ಲು ತೂರಿದರೆ ಪರಪ್ಪನ ಅಗ್ರಹಾರ**

ಸೋಮವಾರದಿಂದ ಸರ್ಕಾರಿ ಹಾಗೂ ಖಾಸಗಿ ಬಸ್‌ಗಳೂ ಸೇರಿದಂತೆ ಎಲ್ಲ ರೀತಿಯ ಬಸ್‌ಗಳ ಸಂಚಾರಕ್ಕೆ ಅವಕಾಶ ನೀಡಿರುವುದಾಗಿ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.

ನಾಳಿನ ಸಂಚಾರಕ್ಕಾಗಿ ಖಾಸಗಿ ವಾಹನಗಳಿಗೆ ಯಾವುದೇ ಪರ್ಮಿಟ್ ಕೇಳುವ ಹಾಗಿಲ್ಲ. ಈ ಬಗ್ಗೆ ಆರ್.ಟಿ.ಒ. ಅಧಿಕಾರಿಗಳು ಹಾಗೂ ಪೊಲೀಸರಿಗೆ ಸೂಚನೆ ನೀಡಿದ್ದೇವೆ ಎಂದವರು ಹೇಳಿದ್ದಾರೆ. ನಾವು ಸಾರ್ವಜನಿಕರ ಪರವಾಗಿದ್ದೇವೆ. ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ ಪಡಿಸಿದರೆ ಇಲ್ಲವೇ ಕಲ್ಲು ತೂರಿದರೆ ಸಹಿಸುವುದಿಲ್ಲ. ಸಣ್ಣ ಗಾಯ ಆದರೂ ಆ ವ್ಯಕ್ತಿಯನ್ನು ಬಿಡಲ್ಲ. ಒಬ್ಬನೇ ಒಬ್ಬ ವ್ಯಕ್ತಿಗೆ ಕಲ್ಲು ತೂರಿದರೆ ಪರಪ್ಪನ ಅಗ್ರಹಾರಕ್ಕೆ ಕಳಿಸುತ್ತೇವೆ ಎಂದೂ ಅವರು ಎಚ್ಚರಿಸಿದ್ದಾರೆ.



**ಅಪಾಯಕ್ಕೆ ಆಹ್ವಾನ ನೀಡುತ್ತಿದೆ ಎಪಿಎಂಸಿ ಮೇಲ್ಸೇತುವೆ ರಸ್ತೆ**

ಪಿ.ಬಿ. ರಸ್ತೆಯಿಂದ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ಇದು. ರಸ್ತೆಯ ಆರಂಭ ಹಾಗೂ ಅಂತ್ಯದಲ್ಲಿ ಬೃಹತ್ ಗುಂಡಿಗಳು ಬಿದ್ದಿರುವುದರಿಂದ ನಿತ್ಯವೂ ವಾಹನ ಸವಾರರು ಪಡಿಪಾಟಲು ಹೇಳತೀರದು. ಎಪಿಎಂಸಿಗೆ ದಾಸ್ತಾನು ತರುವ ಹಾಗೂ ತೆಗೆದುಕೊಂಡು ಹೋಗುವ ಟ್ರ್ಯಾಕ್ಟರ್, ಲಾರಿ ಲೋಡುಗಳು ಪಲ್ಟಿಯಾಗುವ ಸಾಧ್ಯತೆಗಳೂ ಹೆಚ್ಚಾಗಿವೆ. ಡಿಸಿಎಂ ಟೌನ್ ಶಿಪ್ ಬಳಿಗೆ ರೈಲ್ವೇ ಬ್ರಿಡ್ಜ್ ಕಾಮಗಾರಿ ನಡೆಯುತ್ತಿರುವುದರಿಂದ ಕೆಎಸ್ಸಾರ್ಟಿಸಿ ಬಸ್‌ಗಳೂ ಸೇರಿದಂತೆ ವಾಹನ ಸಂಚಾರ ಮತ್ತಷ್ಟು ಹೆಚ್ಚಾಗಿದೆ.

ಈ ಹಿಂದೆ ಇದೇ ಗುಂಡಿಗಳ ಬಗ್ಗೆ ಜನತಾವಾಣಿ ವರದಿ ಮಾಡಿತ್ತು. ಆಗ ಅಧಿಕಾರಿಗಳು ಒಂದಿಷ್ಟು ಮಣ್ಣು ಸುರಿದು ಸುಮ್ಮನಾಗಿದ್ದರು. ಆದರೆ ಈಗ ಗುಂಡಿಗಳ ಗಾತ್ರ ಮತ್ತಷ್ಟು ಹೆಚ್ಚಾಗಿದ್ದರೂ ಸಂಬಂಧ ಪಟ್ಟವರು ಕಣ್ಮುಚ್ಚಿ ಕುಳಿತಿರುವುದು ದುರಂತ. ಕೂಡಲೇ ರಸ್ತೆ ದುರಸ್ತಿ ಪಡಿಸಿ ಮುಂದಾಗುವ ಅನಾಹುತಗಳನ್ನು ತಪ್ಪಿಸಲಿ.

## ದೆಹಲಿಯಂತೆ 'ಮಾದರಿ ಶಾಲೆ'ಗಳ ದತ್ತು ಸ್ವೀಕಾರ

### ಮತದಾರರಿಗೆ ಅಭಿನಂದನಾ ಸಮಾರಂಭದಲ್ಲಿ ಪರಿಷತ್ ಸದಸ್ಯ ಚಿದಾನಂದ ಗೌಡ ಭರವಸೆ

ದಾವಣಗೆರೆ, ಡಿ. 13 – ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್ ಅವರು ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳ ಮಟ್ಟಕ್ಕೆ ಬೆಳೆಸುವ ರೀತಿಯಲ್ಲೇ, ತಮ್ಮ ಕ್ಷೇತ್ರದ ಪ್ರತಿ ತಾಲ್ಲೂಕಿನಲ್ಲೂ ಒಂದು ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸುವುದಾಗಿ ಪರಿಷತ್ ಸದಸ್ಯ ಚಿದಾನಂದ ಗೌಡ ಪ್ರಕಟಿಸಿದ್ದಾರೆ.

ಆಗ್ನೇಯ ಪದವೀಧರ ಕ್ಷೇತ್ರದಿಂದ ತಾವು ಗೆದ್ದ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ನಗರದ ತ್ರಿಶೂಲ್ ಕಲಾ ಭವನದಲ್ಲಿ ಇಂದು ಆಯೋಜಿಸಲಾಗಿದ್ದ ಕ್ಷೇತ್ರದ ಮತದಾರರಿಗೆ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮುಂದಿನ ಆರು ವರ್ಷಗಳಲ್ಲಿ 32 ತಾಲ್ಲೂಕುಗಳಲ್ಲಿ ತಲಾ ಒಂದು ಶಾಲೆಯನ್ನು ದತ್ತು ತೆಗೆದುಕೊಳ್ಳುತ್ತೇನೆ. ಇದಕ್ಕೆ ಸರ್ಕಾರಿ ಅನುದಾನ ವಷ್ಟೇ ಅಲ್ಲದೇ, ಖಾಸಗಿ ಸಂಸ್ಥೆಗಳ ನೆರವನ್ನೂ ತರುತ್ತೇನೆ ಎಂದು ತಿಳಿಸಿದರು.

ಶಿರಾದಲ್ಲಿ ಈಗಾಗಲೇ ಐಎಎಸ್ ಅಕಾಡೆಮಿ ಸ್ಥಾಪಿಸಿದ್ದು, ಪ್ರತಿ ತಾಲ್ಲೂಕಿನ ಐವರಿಗೆ ಅಲ್ಲಿ ಉಚಿತ ತರಬೇತಿ ನೀಡಲಾಗುವುದು. ಪ್ರತಿ ತಾಲ್ಲೂಕಿಗೆ ಒಂದು ಪದವೀಧರ ಸಹಕಾರಿ ಬ್ಯಾಂಕ್ ಸ್ಥಾಪಿಸುತ್ತೇನೆ ಎಂದು ಅವರು ತಿಳಿಸಿದರು.

ಶಿಕ್ಷಕರಿರುವ ಕಡೆ ಮಕ್ಕಳ ಕೊರತೆ, ಮಕ್ಕಳಿದ್ದ ಕಡೆ ಶಿಕ್ಷಕರಿಲ್ಲದೇ ಇರುವ ಸಮಸ್ಯೆಗಳು ರಾಜ್ಯದ ಸರ್ಕಾರಿ ಶಾಲೆಗಳಲ್ಲಿದೆ. ಈ ಹಿನ್ನೆಲೆಯಲ್ಲಿ ಪಂಚಾಯ್ತಿಗೊಂದು ಶಾಲಾ ಸಂಕೀರ್ಣ ಅಭಿವೃದ್ಧಿ ಪಡಿಸಿ, ಅಲ್ಲಿಗೆ ಬರಲು ಆರರಿಂದ 12ನೇ ತರಗತಿ ಮಕ್ಕಳಿಗೆ ಬಸ್ ಸೌಲಭ್ಯ ಕಲ್ಪಿಸಲಾಗುವುದು ಎಂದು ಚಿದಾನಂದ ಹೇಳಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಅಭ್ಯರ್ಥಿ ಘೋಷಣೆ ತಡವಾದರೂ ಪದವೀಧರರು, ಕಾರ್ಯಕರ್ತರು ಹಾಗೂ ಶಿಕ್ಷಕರು ಹಗಲಿರುಳು ದುಡಿದು ಅತಿ ಹೆಚ್ಚು ಮತಗಳಿಂದ (3ನೇ ಪುಟಕ್ಕೆ)




**ಶಾಲೆ ಆರಂಭಕ್ಕೆ ನಾರಾಯಣಸ್ವಾಮಿ ಆಗ್ರಹ**

**ಖಾಸಗಿ ಶಾಲೆಗಳು ಶುಲ್ಕ ಪಡೆಯಬಾರದು ಎಂದು ಸರ್ಕಾರ ಹೇಳಿಲ್ಲ**

ಶಾಲಾ ಶಿಕ್ಷಣ ಬಹುತೇಕ ಒಂದು ವರ್ಷದಿಂದ ನಿಂತಿದೆ. ಇದರಿಂದಾಗಿ ಒಂದರಿಂದ ಹತ್ತನೇ ತರಗತಿವರೆಗಿನ ಒಂದು ಕೋಟಿ ಮಕ್ಕಳ ಪೋಷಕರು ಭವಿಷ್ಯದ ಕಳವಳಕ್ಕೀಡಾಗಿದ್ದಾರೆ. ಈ ನಡುವೆಯೂ ಆರಂಭಿಸಲಾಗಿದ್ದ ವಿದ್ಯಾಗಮ ಯೋಜನೆಯು ಕೆಲವರ ಷಡ್ಯಂತ್ರದಿಂದ ನಿಂತಿದೆ ಎಂದು ಪರಿಷತ್ ಸದಸ್ಯ ಡಾ. ವೈ.ಎ. ನಾರಾಯಣಸ್ವಾಮಿ ಕಿಡಿ ಕಾರಿದ್ದಾರೆ.

ಶಾಲೆಗಳು ಮುಚ್ಚಿರುವುದರಿಂದ ಕೆಲವೆಡೆ ಬಾಲ್ಯ (3ನೇ ಪುಟಕ್ಕೆ)

## ವಾಗ್ಮಿ ಡಾ. ಬನ್ನಂಜೆ ಗೋವಿಂದಾಚಾರ್ಯ ವಿಧಿವಶ



ಉಡುಪಿ, ಡಿ. 13 - ನಾಡಿನ ಹಿರಿಯ ವಿದ್ವಾಂಸ, ವಾಗ್ಮಿ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಬನ್ನಂಜೆ ಗೋವಿಂದಾಚಾರ್ಯ ಭಾನುವಾರ ಬೆಳಗ್ಗೆ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರಿಗೆ ಇತ್ತೀಚೆಗೆ ತೀವ್ರ ಅನಾರೋಗ್ಯ ಕಾಡಿತ್ತು. ಚಿಕಿತ್ಸೆ ಫಲಕಾರಿಯಾಗದೆ ಉಡುಪಿ ಜಿಲ್ಲೆಯ ಅಂಬಲಪಾಡಿಯಲ್ಲಿರುವ (2ನೇ ಪುಟಕ್ಕೆ)

## ರೈತರ ಬೆಂಬಲಿಸಿ ಪಂಜಾಬ್ ಡಿಜಿಪಿ ರಾಜೀನಾಮೆ

ಚಂಡೀಘಡ, ಡಿ. 13 – ಪಂಜಾಬ್‌ನ ಬಂಧೀಖಾನೆಯ ಡಿಐಜಿ ಲಖ್ಮಿಂದರ್ ಸಿಂಗ್ ಜಾಖಡ್ ಅವರು ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸಿ ರಾಜೀನಾಮೆ ನೀಡಿದ್ದಾರೆ. ಶನಿವಾರ ಅವರು ರಾಜ್ಯ (2ನೇ ಪುಟಕ್ಕೆ)

## ಉಜ್ಜಯಿನಿ ಪೀಠದ ಬಗ್ಗೆ ಕಾಶೀ ಜಗದ್ಗುರುಗಳ ಹೇಳಿಕೆಗೆ ಶ್ರೀ ರಂಭಾಪುರಿ, ಶ್ರೀ ಕೇದಾರ ಜಗದ್ಗುರುಗಳ ಖಂಡನೆ



ದಾವಣಗೆರೆ, ಡಿ.13- ವೀರಶೈವ ಪಂಚ ಪೀಠಗಳಲ್ಲಿ ಒಂದಾಗಿರುವ ಶ್ರೀ ಉಜ್ಜಯಿನಿ ಪೀಠದ ವಿಚಾರವಾಗಿ ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸತ್ಯಕ್ಕೆ ದೂರವಾದ ಹಲವಾರು ವಿಚಾರಗಳನ್ನು ಹೇಳಿರುವುದಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹಿಮವತ್ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಮತ್ತು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಇಂದು ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

**ಹಣ ಪಡೆದಿದ್ದು ಸಾಬೀತುಪಡಿಸಿದರೆ ತಾವು ಕೈ ಕಳೆದುಕೊಳ್ಳುತ್ತೇವೆ. ಸಾಬೀತು ಪಡಿಸದಿದ್ದರೆ ಅವರು ನಾಲಿಗೆ ಕತ್ತರಿಸಿಕೊಳ್ಳಲಿ.**
**ಕೇದಾರ ಜಗದ್ಗುರುಗಳ ಸವಾಲು**

ಶ್ರೀ ಉಜ್ಜಯಿನಿ ಸದ್ಧರ್ಮ ಪೀಠಕ್ಕೆ ಸ್ಥಿರ ಜಗದ್ಗುರು ಶ್ರೀ ತ್ರಿಲೋಚನ ಶಿವಾಚಾರ್ಯರನ್ನು ನಾವು ನೇಮಕ ಮಾಡಿರುವುದಿಲ್ಲ. ಈ ಕಾರ್ಯವನ್ನು 1997 ರಲ್ಲಿ ಶ್ರೀ ಉಜ್ಜಯಿನಿ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ಪರಂಪರೆಯಿಂದ ಬಂದ ಪಂಚ ಮುದ್ರಾ ಸಹಿತ ಮೂಲ ಉಜ್ಜಯಿನಿಯಲ್ಲಿ ಪಟ್ಟಾಭಿಷೇಕ ಮಾಡಿ, ಸ್ವತಃ ತಮ್ಮೊಂದಿಗೆ ನಾಡಿನ ನಾನಾ ಭಾಗಗಳಲ್ಲಿ ಅಡ್ಡಪಲ್ಲಕ್ಕಿ ಹಾಗೂ ಧರ್ಮ ಸಭೆಗಳಲ್ಲಿ ಸಮಾನ ಆಸನದಲ್ಲಿ ಗೌರವಿಸಿದ್ದಾರೆ. ಹಿರಿಯರ ಈ ಕಾರ್ಯಕ್ಕೆ ನಾವೀರ್ವರೂ ಮುಕ್ತಿಮಂದಿರದಲ್ಲಿ ನಡೆದ ಶಕ್ತಿ ಸಂವರ್ಧನಾ ಸಂಕಲ್ಪ ಸಮಾರಂಭದಲ್ಲಿ ಮಾನ್ಯತೆ ನೀಡಿದ್ದೇವೆ. ಇದೇ ಸಂದರ್ಭದಲ್ಲಿ ನಾವು ಯಾರನ್ನೂ ಅಸಿಂಧುಗೊಳಿಸುವಂತಹ ಕೆಲಸ (2ನೇ ಪುಟಕ್ಕೆ)




# ಇಂಡಿಯನ್ ಸೌಹಾರ್ದ ಸಹಕಾರಿಗೆ 11 ಲಕ್ಷ ರೂ. ಲಾಭ

ಹರಿಹರ, ಡಿ.13- ನಗರದ ಇಂಡಿಯನ್ ಸೌಹಾರ್ದ ಸಹಕಾರಿ ನಿಯಮಿತವು 2019-2020 ನೇ ಸಾಲಿನಲ್ಲಿ 10,99,680 ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಸಿ.ಎನ್. ಹುಲಿಗೆಪ್ಪ ತಿಳಿಸಿದ್ದಾರೆ.

ಸಂಘದ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಸಂಸ್ಥೆಯ 2ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಹರಿಹರ

ನಮ್ಮ ಸಂಸ್ಥೆ ಪ್ರಾರಂಭಗೊಂಡು ಎರಡೇ ವರ್ಷಗಳಲ್ಲಿ ಸುಮಾರು 751 ಸದಸ್ಯರನ್ನು ಹೊಂದಿ ಉತ್ತಮ ಲಾಭಾಂಶ ಗಳಿಸುವತ್ತ ದಾಪುಗಾಲು ಹಾಕುತ್ತಿದೆ. ಗ್ರಾಹಕರ ಸೇವೆಯ ಸದುದ್ದೇಶದಿಂದ ವಿವಿಧ ಸೇವಾ ಸೌಲಭ್ಯಗಳನ್ನು ನೀಡುತ್ತಿದ್ದು, ಅದರಲ್ಲಿ ಪ್ರಮುಖವಾಗಿ ಸಣ್ಣ ವ್ಯಾಪಾರಿಗಳಿಗೆ ಸಾಲವನ್ನು ಒದಗಿಸಿ ಅವರ ಕುಟುಂಬವನ್ನು ಆರ್ಥಿಕ ಸ್ವಾವಲಂಬನೆಗೊಳಿಸಲು ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಸಹಕಾರಿಯು ಮುಂದಿನ ದಿನಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸದಸ್ಯರನ್ನು ಮಾಡುವುದು, ಠೇವಣಿ ಮೊತ್ತವನ್ನು ಹತ್ತು ಕೋಟಿಗೆ ಹೆಚ್ಚಿಸುವುದು, ಸ್ವಂತ ಕಟ್ಟಡವನ್ನು ಹೊಂದುವುದಕ್ಕೆ ಪೂರ್ವ ತಯಾರಿ ಮಾಡುವುದು, ಗ್ರಾಹಕರಿಗೆ ಎನ್‌ಇಎಫ್‌ಟಿ ಮೂಲಕ ಅವರ ಖಾತೆಗೆ ಹಣ ವರ್ಗಾವಣೆ ಮಾಡುವುದು ಸೇರಿದಂತೆ ಹಲವಾರು ಗುರಿಯನ್ನು ಹೊಂದಿದೆ ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎಂ.ಬಿ. ಪ್ರಭುದೇವ್, ನಿರ್ದೇಶಕರಾದ ಮನೋಹರ ಸಾ ಲದ್ವಾ, ಮಲ್ಲೇಶಪ್ಪ, ಕೆ.ಹೆಚ್. ಜೋಸೆಫ್ ದಿವಾಕರ್, ಮಾರುತಿ ಶೆಟ್ಟಿ, ರಿಯಾಜ್ ಅಹ್ಮದ್, ಸೈಯದ್ ಆಸೀಫ್ ಅಹ್ಮದ್, ಉಮಾಶಂಕರ್, ಜಗದೀಶ್ ಚೂರಿ, ಸುಕುಮಾರ್ ಹೆಚ್.ಎಂ, ರೇಖಾ ಯು. ಕಲಾಲ್, ಸುಜಾತ ಡ್ಯಾನಿಯಲ್, ಮುಖ್ಯ ಕಾರ್ಯನಿರ್ವಾಹಕ ರವೀಂದ್ರನಾಥ ಆರ್.ಎಸ್ ಮತ್ತು ಸಿಬ್ಬಂದಿ ವರ್ಗದ ನಿಕಿತಾ ಕಲಾಲ್, ರಿರ್ಚಡ್, ಟೈಸನ್, ಪಿಗ್ಮಿ ಸಂಗ್ರಹಕಾರರಾದ ಚಂದ್ರಶೇಖರ್ ಎಸ್.ಎನ್., ಮಂಜುನಾಥ್ ಎ., ಹನುಮಂತಪ್ಪ ಟಿ.ಎಸ್., ಸಂದೀಪ್ ಎಸ್. ಎನ್., ಇಮ್ಯಾನುವೆಲ್ ಮಧುಕರ್, ಮಲ್ಲೇಶ್ ಆರ್., ಅನಿಲ್ ಪಿ.ಜೆ., ರವಿಕುಮಾರ್ ಎಸ್., ಸತೀಶ್ ಪಿ. ಇತರರು ಹಾಜರಿದ್ದರು.

ಮುಖ್ಯ ಕಾರ್ಯನಿರ್ವಾಹಕ ಆರ್.ಎಸ್. ರವೀಂದ್ರನಾಥ ಕಾರ್ಯಕ್ರಮ ನಿರೂಪಿಸಿದರು.

## ಹೆಬ್ಬಾಳ್ : ಇಂದು ರೈತರ ಪ್ರತಿಭಟನೆ

ದೆಹಲಿಯಲ್ಲಿ ನಡೆಯುತ್ತಿರುವ ರೈತ ಚಳುವಳಿಯ ಮುಂದುವರಿಕೆಯ ಭಾಗವಾಗಿ ಹಾಗೂ ರೈತ ಸಂಘಟನೆಗಳ ಒಕ್ಕೂಟ (AIKSCC)ದ ಕರೆಯ ಮೇರೆಗೆ ಇಂದು ದಾವಣಗೆರೆ ತಾಲ್ಲೂಕಿನ ಹೆಬ್ಬಾಳ್ ಟೋಲ್‌ಗೇಟ್ ಬಳಿ ದಾವಣಗೆರೆಯ ಎಲ್ಲಾ ಪ್ರಗತಿಪರ ರೈತ ಸಂಘಟನೆಗಳ ಒಕ್ಕೂಟದಿಂದ ಇಂದು ಬೆಳಿಗ್ಗೆ 11.45 ಗಂಟೆಗೆ ಹೆಬ್ಬಾಳ್ ಟೋಲ್‌ಗೇಟ್ ಬಳಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಆವರಗೆರೆ ಉಮೇಶ್, ಹೊನ್ನೂರು ಮುನಿಯಪ್ಪ, ಬಲ್ಲೂರು ರವಿಕುಮಾರ್, ಹುಚ್ಚವ್ವನಹಳ್ಳಿ ಮಂಜುನಾಥ್, ತೇಜಸ್ವಿ ಪಟೇಲ್, ಇ. ಶ್ರೀನಿವಾಸ್, ತಿಪ್ಪೇಸ್ವಾಮಿ ಅಣಬೇರು ತಿಳಿಸಿದ್ದಾರೆ.

## ಹರಪನಹಳ್ಳಿ ; ಸಾರಿಗೆ ನೌಕರರ ಮುಷ್ಕರ : 15-18 ಲಕ್ಷ ರೂ. ನಷ್ಟ

ಹರಪನಹಳ್ಳಿ, ಡಿ.13- ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಾರಿಗೆ ನೌಕರರ ಮುಷ್ಕರ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಇಲ್ಲಿಯ ಡಿಪೋದಿಂದ 15 ರಿಂದ 18 ಲಕ್ಷ ರು. ನಷ್ಟ ಸಂಭವಿಸಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಇಲ್ಲಿಯ ಡಿಪೋ ವ್ಯವಸ್ಥಾಪಕ ವಿನಾಯಕ ಅವರು ಪ್ರತಿ ದಿನ 5-6 ಲಕ್ಷ ರು. ಗಳು ಸಂಗ್ರಹವಾಗುತ್ತಿತ್ತು, ಕಳೆದ ಮೂರು ದಿನಗಳಲ್ಲಿ ಅಂದಾಜು 15-18 ಲಕ್ಷ ರು. ನಷ್ಟ ಸಂಭವಿಸಿದೆ ಎಂದು ಹೇಳಿದ್ದಾರೆ.

ನಾವು ನೌಕರರ ಮನವೊಲಿಸಲು ಪ್ರಯತ್ನಿಸುತ್ತಲೇ ಇದ್ದೇವೆ, ಆದರೆ ನೌಕರರು ಕರ್ತವ್ಯಕ್ಕೆ ಬರುತ್ತಾ ಇಲ್ಲ ಎಂದು ಹೇಳಿದರು. ಭಾನುವಾರ ಸಹ ಡಿಪೋದಿಂದ ಒಂದೂ ಬಸ್ಸು ಹೊರಗಡೆ ಹೋಗಿಲ್ಲ ಎಂದು ಅವರು ಸ್ಪಷ್ಟ ಪಡಿಸಿದರು.

ಬಸ್ ನಿಲ್ದಾಣ ಬಸ್ಸುಗಳಿಲ್ಲದೆ ಬಿಕೋ ಎನ್ನುತ್ತಿದ್ದು, ಖಾಸಗಿ ಬಸ್ಸು ಹಾಗೂ ಇತರೆ ವಾಹನಗಳಿಗೆ ಭಾರೀ ಬೇಡಿಕೆ ಬಂದಿದೆ.

# ಖಾಸಗಿ ಶಿಕ್ಷಕರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಲಿ



ಜಗಳೂರಿನ ಕಾರ್ಯಕ್ರಮದಲ್ಲಿ ಖಾಸಗಿ ಶಿಕ್ಷಕರ ಬಳಗದ ಜಿಲ್ಲಾಧ್ಯಕ್ಷ ರಂಗನಾಥ್

ಜಗಳೂರು, ಡಿ.13 - ಕೊರೊನಾ ಮಹಾಮಾರಿ ಆಕ್ರಮಣದ ಪರಿಣಾಮ ಖಾಸಗಿ ಶಾಲೆ ಶಿಕ್ಷಕರು ಹಾಗೂ ಉಪನ್ಯಾಸಕರು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು ಸರ್ಕಾರ ಅವರಿಗೆ ನೆರವಾಗಬೇಕು ಎಂದು ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಕರ ಬಳಗದ ಜಿಲ್ಲಾಧ್ಯಕ್ಷ ರಂಗನಾಥ್ ಮನವಿ ಮಾಡಿದರು.

ಪಟ್ಟಣದ ಪ್ರೇರಣಾ ಸಮಾಜಸೇವಾ ಚರ್ಚ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಕರ ಹಾಗೂ ಉಪನ್ಯಾಸಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸದಸ್ಯತ್ವ ನೋಂದಣಿ ಅಭಿಯಾನ ಹಾಗೂ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ರಾಜ್ಯದಲ್ಲಿ ಖಾಸಗಿ ಶಾಲಾ, ಕಾಲೇಜುಗಳ ಶಿಕ್ಷಕರು ಹಾಗೂ ಉಪನ್ಯಾಸಕರು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ದಿಯ ಮೂಲಕರ್ತೃಗಳಾಗಿ ಕೇವಲ ಗೌರವ ಧನಕ್ಕೆ ಶ್ರಮಿಸುತ್ತಿದ್ದಾರೆ. ಆದರೆ ಪ್ರಸಕ್ತ ಸಾಲಿನಲ್ಲಿ ಕೊರೊನಾ ಹೆಮ್ಮಾರಿಗೆ ಸಿಲುಕಿ ಲಾಕ್ ಡೌನ್ ಅವಧಿಯಿಂದ ಶಾಲಾ ಕಾಲೇಜುಗಳು ಬಾಗಿಲು ಮುಚ್ಚಿರುವುದರಿಂದ ನಯಾಪೈಸೆಯೂ ಗಳಿಸದೆ ಬದುಕು ದುಸ್ತರವಾಗಿ ಹಲವು ಕುಟುಂಬಗಳು ಬೀದಿಗೆ ಬಿದ್ದಿವೆ ಎಂದರು.

ಸಂಘದ ತಾಲ್ಲೂಕು ಅಧ್ಯಕ್ಷ ಬಸವರಾಜ್ ಮಾತನಾಡಿ, ಬರಪೀಡಿತ ತಾಲ್ಲೂಕಿನಲ್ಲಿ ಯಾವುದೇ ಆದಾಯದ ಮೂಲಗಳಿಲ್ಲದೆ ಬಿ.ಎಡ್, ಡಿ.ಎಡ್, ಐಟಿಐ, ವೃತ್ತಿಪರ ಶಿಕ್ಷಣ ಹಾಗೂ ಸ್ನಾತಕೋತ್ತರ ಪದವಿ ಪಡೆದ ನಿರುದ್ಯೋಗಿ ವಿದ್ಯಾವಂತ ಯುವಕರು ದುಡಿಮೆಗೆ ವಲಸೆ ಹೋಗುತ್ತಿದ್ದಾರೆ. ಇನ್ನೂ ಕೆಲವರು ಖಾಸಗಿ ಶಾಲಾ ಕಾಲೇಜುಗಳನ್ನು ಅವಲಂಬಿಸಿದ್ದು, ಜೀವನ ಭದ್ರತೆಯಿಲ್ಲದೆ ಪರದಾಡುವಂತಾಗಿದೆ ಎಂದು ಅಳಲು ತೊಡಿಕೊಂಡರು.

ಜ್ಞಾನ ತರಂಗಿಣಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಪಿ.ಎಸ್. ಅರವಿಂದನ್ ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರೇರಣ ಚರ್ಚ್‌ನ ಫಾದರ್ ವಿಲಿಯಂ ಮಿರಾಂದ, ಫಾದರ್ ಸುನೀಲ್, ಸೂಜ್ ಸಂಘದ ತಾಲ್ಲೂಕು ಕಾರ್ಯದರ್ಶಿ ಗಿರಿಪ್ರಸಾದ್, ತಾಲ್ಲೂಕು ಉಪಾಧ್ಯಕ್ಷ ತಿಮ್ಮರಾಜ್, ಗೌರವಾಧ್ಯಕ್ಷ ಗುರುಸ್ವಾಮಿ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಾರಿಗೆ ನೌಕರರಿಗೆ ರಾಣೇಬೆನ್ನೂರು ರೈತರ ಬೆಂಬಲ



ರಾಣೇಬೆನ್ನೂರು, ಡಿ.13 - ತಮ್ಮ ಬೇಡಿಕೆಗಳಿಗಾಗಿ ಧರಣಿ ನಿರತ ರಸ್ತೆ ಸಾರಿಗೆ ಸಂಸ್ಥೆಯ ನೌಕರರಿಗೆ ರೈತ ಸಂಘದ ರವೀಂದ್ರಗೌಡ ಪಾಟೀಲ, ಹನುಮಂತಪ್ಪ ಕಬ್ಬಾರ, ದಿನಗೂಲಿ ನೌಕರರ ಅಧ್ಯಕ್ಷ ಬಸವರಾಜ ಕೊಂಗಿ, ಕರವೇ ಅಧ್ಯಕ್ಷ ನಿತ್ಯಾನಂದ ಕುಂದಾಪೂರ ಅವರು ಇಂದು ಭೇಟಿ ನೀಡಿ ಬೆಂಬಲ ವ್ಯಕ್ತ ಪಡಿಸಿದರು.

# ರೈತರ ಬೆಂಬಲಿಸಿ ಪಂಜಾಬ್ ಡಿಜಿಪಿ ರಾಜೀನಾಮೆ

**(1ನೇ ಪುಟದಿಂದ)** ಸರ್ಕಾರಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ನಾನೂ ರೈತ ಎಂದು ರಾಜೀನಾಮೆ ಪತ್ರದಲ್ಲಿ ಹೇಳಿರುವ ಡಿಐಜಿ, ನನ್ನ ಅಂತರಾಳದ ಮಾತು ಕೇಳಿ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಡಿಸೆಂಬರ್ 12ರಿಂದ ನಿವೃತ್ತನಾಗಿರುವುದಾಗಿ ಪರಿಗಣಿಸಬೇಕೆಂದು ತಿಳಿಸಿದ್ದಾರೆ.

# ಜಗದ್ಗುರುಗಳ ಹೇಳಿಕೆ ರಂಭಾಪುರಿ, ಕೇದಾರ ಜಗದ್ಗುರುಗಳ ಖಂಡನೆ

**(1ನೇ ಪುಟದಿಂದ)** ಮಾಡಿರುವುದಿಲ್ಲ. ಆದರೂ ಸಹ ಕಾಶೀ ಜಗದ್ಗುರುಗಳು ಹಾಗೂ ಅವರ ಅನುಯಾಯಿಗಳು ಗೊಂದಲಗಳನ್ನು ಸೃಷ್ಠಿ ಮಾಡಿರುತ್ತಾರೆ ಎಂದು ತಿಳಿಸಿದರು.

ಈ ಸಮಸ್ಯೆ 1997 ರಿಂದಲೂ ಇದೆ. ತ್ರಿಲೋಚನ ಜಗದ್ಗುರುಗಳು ತಮ್ಮ ಪಟ್ಟಾಭಿಷೇಕದ ನಂತರ ತಮಗಾಗಿರುವ ಅನ್ಯಾಯವನ್ನು ಪರಿಶೀಲಿಸಿ ಉಜ್ಜಯಿನಿ ಪೀಠದ ಪರಂಪರೆಯನ್ನು ಮುಂದುವರೆಸಲು 2015 ರಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆ ಅಧ್ಯಕ್ಷರಿಗೆ ಮನವಿ ಪತ್ರ ನೀಡಿರುತ್ತಾರೆ. ಇದರ ಜೊತೆಗೆ ಧಾರ್ಮಿಕ ಪರಂಪರೆ ಮತ್ತು ಕಾನೂನಾತ್ಮಕ ಪೂರಕ ದಾಖಲೆಗಳನ್ನು ನೀಡಿರುತ್ತಾರೆ. ಈ ಸಂಬಂಧವಾಗಿ 2015 ರ ಸೆಪ್ಟೆಂಬರ್ 16ನೇ ತಾರೀಖು ಶ್ರೀ ಮದ್ರಂಭಾಪುರಿ ಶಾಖಾ ಖಾಸಾ ಶಾಖಾ ಮಠ ಸಿದ್ಧರಬೆಟ್ಟದಲ್ಲಿ ಶ್ರೀ ರಂಭಾಪುರಿ, ಶ್ರೀ ಕೇದಾರ ಹಾಗೂ ಶ್ರೀ ಕಾಶೀ ಜಗದ್ಗುರುಗಳು ಸೇರಿ ಸುದೀರ್ಘ ಚರ್ಚೆ ನಡೆಸಿ ಉಜ್ಜಯಿನಿ ಪೀಠದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ನಿರ್ಧರಿಸಲಾಗಿತ್ತು. ಕಾಶೀ ಜಗದ್ಗುರುಗಳಿಗೆ ಎಲ್ಲಾ ವಿಷಯಗಳನ್ನು ಮನವರಿಕೆ ಮಾಡಿಕೊಟ್ಟಾಗ್ಯೂ ಹೊನ್ನಾಳಿ ಹಿರೇಮಠದ ಲಿಂ. ಒಡೆಯರ್ ಚಂದ್ರಶೇಖರ ಶಿವಾಚಾರ್ಯರ ಶ್ರದ್ಧಾಂಜಲಿ ಸಮಾರಂಭದಲ್ಲಿ 2015 ರ ನವೆಂಬರ್ 1 ರಂದು ಕಾಶೀ ಜಗದ್ಗುರುಗಳ ಪ್ರೇರಣೆಯಂತೆ ಇಂದಿನ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ಅತಿರೇಕದ ಮಾತುಗಳನ್ನಾಡಿ ಸಮಸ್ಯೆ ಮತ್ತಷ್ಟು ಕಗ್ಗಂಟಾಗಲು ಕಾರಣರಾದರು. ಹೀಗೆ ಪಂಚಪೀಠಾಚಾರ್ಯರಲ್ಲಿ ಪರಸ್ಪರ ವಿಶ್ವಾಸಕ್ಕೆ ಧಕ್ಕೆ ಉಂಟಾಗಲು ಹಾಗೂ ಪೀಠ ಪರಂಪರೆ ಉಲ್ಲಂಘಿಸಿದ್ದಕ್ಕೆ ಕಾಶೀ ಜಗದ್ಗುರುಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂದರು.

1918 ರಲ್ಲಿ ಕಾಶೀ ಪೀಠದಲ್ಲಿ ಜರುಗಿದ ಶ್ರೀ ಜಗದ್ಗುರು ಪಂಚಾಚಾರ್ಯ ಸಮಾವೇಶದಲ್ಲಿ ಕೈಗೊಂಡ ಒಂದು ಪೀಠಕ್ಕೆ ಒಬ್ಬರೇ ಜಗದ್ಗುರುಗಳಿರಬೇಕೆಂಬ ನಿಯಮಾವಳಿಯ ಅರ್ಧ ಸತ್ಯವನ್ನು ಮಾತ್ರ ಕಾಶೀ ಜಗದ್ಗುರುಗಳು ಹೇಳಿದ್ದಾರೆಯೇ ಹೊರತು, ನಂತರದ ವಿಚಾರಗಳನ್ನು ಗಮನಿಸಿರುವುದಿಲ್ಲ. ಈ ನಿರ್ಣಯ ಕೈಗೊಳ್ಳುವಾಗ ಕೇದಾರ ಪೀಠದ ವಿಶ್ವಲಿಂಗ ಜಗದ್ಗುರುಗಳು ಉಪಸ್ಥಿತರಿರಲಿಲ್ಲ. ಮುಂದೆ ಉಜ್ಜಯಿನಿ ಪೀಠದ ಸಿದ್ಧಲಿಂಗ ಜಗದ್ಗುರುಗಳು ಕೇದಾರ ಜಗದ್ಗುರುಗಳನ್ನು ಬರಮಾಡಿಕೊಂಡು ಹಲವಾರು ಭಾಗಗಳಲ್ಲಿ ಉತ್ಸವ, ಸಮಾರಂಭಗಳನ್ನು ನೆರವೇರಿಸಿದರು. ಈ ಪೂರ್ವದಲ್ಲಿಯೇ ಕೇದಾರ ಪೀಠಕ್ಕೆ ಸ್ಥಿರ-ಚರ ಜಗದ್ಗುರುಗಳನ್ನು ನೇಮಿಸಿ ಕೇದಾರ ಪೀಠದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು ಸಹಕರಿಸಬೇಕೆಂದು ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳಿಗೆ ವಿಶ್ವಲಿಂಗ ಜಗದ್ಗುರುಗಳು ಮನವಿ ಮಾಡಿಕೊಂಡಿದ್ದರು.

ಉಜ್ಜಯಿನಿ ಪೀಠದ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಲಿಂಗೈಕ್ಯರಾದ ಮೇಲೆ ಉಜ್ಜಯಿನಿ ಸಿದ್ಧೇಶ್ವರ ಜಗದ್ಗುರುಗಳವರ ಪಟ್ಟಾಭಿಷೇಕವನ್ನು ರಂಭಾಪುರಿ ಶ್ರೀ ಶಿವಾನಂದ ಜಗದ್ಗುರುಗಳು ಕೇದಾರ ಚಿದ್ಘನಲಿಂಗ ಜಗದ್ಗುರುಗಳು ನೆರವೇರಿಸಿದರು. ಇಂಥ ಅನೇಕ ಪ್ರಮಾಣಗಳಿಂದ ಒಂದು ಪೀಠಕ್ಕೆ ಒಬ್ಬರೇ ಜಗದ್ಗುರುಗಳಿರಬೇಕೆಂಬ 1918 ರ ನಿಯಮ ಮುರಿದುಹೋಗಿದೆ. ಅಷ್ಟೇ ಅಲ್ಲದೇ ಲಿಂಗೈಕ್ಯರಾದ ಮುರುಳಸಿದ್ದ ಜಗದ್ಗುರುಗಳಿಗೆ ಚರ ಪಟ್ಟಾಧಿಕಾರ ಕೊಟ್ಟ ದಾಖಲೆ ಸ್ಪಷ್ಟವಾಗಿದ್ದರೂ ಕಾಶೀ ಜಗದ್ಗುರುಗಳು ಜಾಣ ಕುರುಡರಂತೆ ವರ್ತಿಸುವುದರ ಹಿನ್ನೆಲೆ ಎಲ್ಲರಿಗೂ ಗೊತ್ತಾಗುತ್ತದೆ. ಶ್ರೀ ಜಗದ್ಗುರು ಪಂಚಾಚಾರ್ಯರ ಒಕ್ಕೂಟ ವ್ಯವಸ್ಥೆಯ ನಿಯಮ, ನಿಬಂಧನೆಗಳನ್ನು ಕಾಶೀ ಜಗದ್ಗುರುಗಳೇ ಉಲ್ಲಂಘಿಸಿದ್ದನ್ನು ಕಾಣಬಹುದು ಎಂದು ತಿಳಿಸಿದರು.

ಉಜ್ಜಯಿನಿ ಪೀಠದ ವಿಚಾರವೇ ಇರಲಿ, ಇನ್ನೊಂದು ವಿಚಾರಗಳಿರಲಿ ಪರಸ್ಪರ ಸದ್ಭಾವನೆಯಿಂದ ಕುಳಿತು ಮಾತನಾಡಿದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಪಂಚ ಪೀಠಗಳ ಆಂತರಿಕ ವಿಚಾರವಾಗಿರುವುದರಿಂದ ನಾಲ್ಕು ಗೋಡೆ ಮಧ್ಯೆ ಪರಿಹಾರ ಆಗಲೆಂಬ ಸದುದ್ದೇಶ ನಮಗಿರುವಾಗ ಕಾಶೀ ಜಗದ್ಗುರುಗಳು ಸಮಾಲೋಚಿಸದೇ ನೇರವಾಗಿ ಪತ್ರಿಕೆಗಳಿಗೆ ಮತ್ತು ದೃಶ್ಯ ಮಾಧ್ಯಮಗಳಿಗೆ ಹೇಳಿಕೆ ಕೊಟ್ಟು ಗೊಂದಲ ಸೃಷ್ಠಿ ಮಾಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅನೇಕ ಶಿವಾಚಾರ್ಯರು, ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಗೋವಿಂದಾಚಾರ್ಯರು

1936 ಅಂಬಲಪಾಡಿ ಯಲ್ಲಿ ಜನಿಸಿದ ಒಂದು
ಜ್ಯೋತಿ
ಬನ್ನಂಜೆ ಗೋವಿಂದಾಚಾರ್ಯರೆಂಬ ಕೀರ್ತಿ
ಪದ್ಮಶ್ರೀ ಪುರಸ್ಕೃತ ವಿದ್ವಾಂಸರು
ಸಂಸ್ಕೃತ ಕನ್ನಡ ಭಾಷೆಯಲ್ಲಿ ಪರಿಣಿತರು

ಗೋ ಎಂದರೆ ಗೋವಿನಷ್ಟೇ ಪವಿತ್ರ
ವಿಂ ಎಂದರೆ ವಿಂಧ್ಯದಷ್ಟು ಅಧ್ಯಯನ
ದಾ ಎಂದರೆ ಮಾಧ್ವಸಂಪ್ರದಾಯದ ದಾರಿದೀಪ
ಚಾ ಎಂದರೆ ಚಾರಿತ್ರದಲ್ಲಿ ಶುದ್ಧತೆ

ರ್ಯ ಎಂದರೆ ತಿಳಿಯುವರಿಗೆ ಆರ್ಯನಂತೆ
ದೇಶದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರು
ಮಾಧ್ವ ತತ್ವದ ಹೆಮ್ಮರವಾಗಿದ್ದರು
ಹಿಂದೂ ಧರ್ಮದ ಪ್ರತೀಕವಾಗಿದ್ದರು
ವೇದ ಉಪನಿಷತ್‌ಗಳನ್ನೆಲ್ಲ ಬಲ್ಲವರು

ಪವಿತ್ರಾತ್ಮ ಇಂದು ಅಗಲಿದೆ
ಮಧ್ವ ಬಾಂಧವರಿಗೆ ದೊಡ್ಡ ನಷ್ಟವಾಗಿದೆ
ಧರ್ಮಾಚರಣೆಯ ಬಗ್ಗೆ ಸ್ಪಷ್ಟ ವಾಗಿ
ಒಳ್ಳೆಯ ವಾಗ್ಮಿ ನಮ್ಮನು ಅಗಲಿದ್ದಾರೆ

- ಕೋಮಲ ವಸಂತ್‌ಕುಮಾರ್

# ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ-ಆಪರೇಟಿವ್ ಮಹಾಸಭೆ



ದಾವಣಗೆರೆ ಡಿ.13 - ನಗರದ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ-ಆಪರೇಟಿವ್ ಸಂಸ್ಥೆಯ 4ನೇ ವರ್ಷದ ಸರ್ವ ಸದಸ್ಯರ ಮಹಾಸಭೆ ಸಂಸ್ಥೆಯ ಆವರಣದಲ್ಲಿ ಇಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಬಿ.ಸುರೇಶ್ ಹಾಲೇಕಲ್ ವಹಿಸಿದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜೆ.ಕೆ ಶಿವಕುಮಾರ್, ನಿರ್ದೇಶಕರುಗಳಾದ ಕೆ.ಹೆಚ್.ಶಿವಯೋಗಪ್ಪ, ಆರ್.ಎನ್. ಮಾರುತಿ, ಎನ್.ರಾಜಣ್ಣ, ಹೆಚ್.ಬಿ.ಮಂಜುನಾಥ, ಎಸ್.ವಿ.ರುದ್ರಮುನಿ, ಸಿ. ಹನುಮಂತಪ್ಪ, ಟಿ.ಮಹಾಂ ತೇಶ್, ಎಂ.ಹೆಚ್.ರಾಜಪ್ಪ, ಮಲ್ಲಿಕಾರ್ಜುನ್ ಪಿ.ವಾಲಿ, ಶ್ರೀಮತಿ ಆಶಾ ಕೃಷ್ಣಮೂರ್ತಿ, ಶ್ರೀಮತಿ ಶ್ವೇತಾ ಹೆಚ್.ಟಿ., ಆಂತರಿಕ ಲೆಕ್ಕ ಪರಿಶೋಧಕ ಹೆಚ್.ತಿರುಕಪ್ಪ, ಪ್ರಧಾನ ವ್ಯವಸ್ಥಾಪಕ ಆರ್.ವೆಂಕಟಾಚಲಮೂರ್ತಿ, ಲೆಕ್ಕಪರಿಶೋಧಕ ಡಿ.ಇ. ಹರ್ಷ ಮತ್ತಿತರರು ಉಪಸ್ಥಿತರಿದ್ದರು.

## ಸಂಧಾನಕ್ಕೆ ಒಪ್ಪಿ ನಂತರ ಉಲ್ಟಾ ಆದ ನೌಕರರು

**(1ನೇ ಪುಟದಿಂದ)** ತಳ್ಳಿ ಹಾಕಿರುವ ಸಚಿವರು, ಕೋರ್ಟ್ ಆದೇಶದ ಅನ್ವಯ ನಾವು ಸಂಘಟನೆಗಳ ಜೊತೆ ಮಾತನಾಡಿದ್ದೇವೆ. ಮಾನವೀಯತೆ ದೃಷ್ಟಿಯಿಂದ ಮಾನ್ಯತೆ ಪಡೆಯದ ಸಂಘಟನೆಯ ಜೊತೆಗೂ ಮಾತನಾಡಿದ್ದೇವೆ ಎಂದಿದ್ದಾರೆ.

ಸಾರಿಗೆ ನೌಕರರ ಮುಖಂಡರೂ ಸಹ ಸೌಜನ್ಯದಿಂದ ಮಾತನಾಡಿದ್ದಾರೆ. ಬೇಡಿಕೆಗಳು ಈಡೇರಿವೆ. ಆದರೆ, ನೌಕರ ಅಲ್ಲದೇ ಇರುವ ವ್ಯಕ್ತಿಯ ಜೊತೆ ಮಾತನಾಡಿ ನಿಲುವು ಬದಲಿಸಿದ್ದಾರೆ. ವಿಧಾನಸೌದದಲ್ಲಿ ಒಂದು ಮಾತು ಅಲ್ಲೊಂದು ಮಾತು ಎಂದರೆ ಜನ ಹೇಗೆ ನಂಬುತ್ತಾರೆ. ಈ ರೀತಿಯ ನಾಯಕತ್ವದಿಂದ ಒಳ್ಳೆಯದಾಗಲ್ಲ ಎದವರು ತಿಳಿಸಿದ್ದಾರೆ.

ಹತ್ತು ಬೇಡಿಕೆಗಳಲ್ಲಿ ಒಂಭತ್ತು ಈಡೇರಿಸಿದ್ದೇವೆ. ಒಂದು ಬೇಡಿಕೆಯ ಬಗ್ಗೆ ಕೊರೊನಾ ನಂತರದಲ್ಲಿ ಮಾತನಾಡಲು ಮುಕ್ತ ಮನಸ್ಸು ಹೊಂದಿದ್ದೇವೆ. ಪ್ರತಿಷ್ಠೆ ಬೇಡ. ಸಂಸ್ಥೆಯ ಬುಡಕ್ಕೆ ಡೈನಾಮೈಟ್ ಇಡಬೇಡಿ ಎಂದು ಅಶೋಕ್ ಹೇಳಿದ್ದಾರೆ.

**ಸೈಟುಗಳು ಮಾರಾಟಕ್ಕೆ**
ಶಾಮನೂರು
ವಾಜಪೇಯಿ ಲೇಔಟ್‌ನಲ್ಲಿ.
30x40 ವೆಸ್ಟ್, 60x40 ವೆಸ್ಟ್
ಕಿರಣ್ ಬೂಸನೂರ್ (ಏಜೆಂಟ್)
98440-63409, 97315-63409

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ,
ಬಾಟ್ಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ
ಧನ್ಯಕುಮಾರ್ ಶಾಮನೂರು
97415 62589
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x46 ಪೂರ್ವ, 30x48 ಪೂರ್ವ, 30x56 ಪೂರ್ವ, ಎಸ್.ಎಸ್. ಬಡಾವಣೆಯಲ್ಲಿ, ಬೂಸ್ನೂರು ಸ್ಕೂಲ್ ಹತ್ತಿರ 30x40 ಪಶ್ಚಿಮ, ಆಂಜನೇಯ ಬಡಾವಣೆ 40x60 ದಕ್ಷಿಣ
ಸ್ವಾಮಿ, ಏಜೆಂಟ್, ವಿದ್ಯಾನಗರ
ಮೊ. 97421-44715
ಶಾಮನೂರು ನಾಗರಾಜ್
ಮೊ. 98448-83303

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್‌ನಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ
80x60 East, 60x40 North, 60x40 west, 70x50 East South Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ, ನಿಜಲಿಂಗಪ್ಪ ಬಡಾವಣೆಯಲ್ಲಿ
30x50 South, 40x60 South, 30x40 North,
ರಿಯಲ್ ಎಸ್ಟೇಟ್ ಏಜೆಂಟ್
ಐನಳ್ಳಿ ಚನ್ನಬಸಪ್ಪ
99166 12110

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ದಾವಣಗೆರೆ ನಗರದಲ್ಲಿ ಇರುವ ಹೋಲ್‌ಸೇಲ್ ಫಾರ್ಮಾದಲ್ಲಿ ಕೆಲಸ ಮಾಡಲು ಡೆಲಿವರಿ ಹುಡುಗರು ಬೇಕಾಗಿದ್ದಾರೆ. ಸೈಕಲ್ ಇದ್ದವರಿಗೆ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ:
08192 272684

**ಬೇಕಾಗಿದ್ದಾರೆ**
ಗಾರ್ಡನ್ ಕೆಲಸಕ್ಕೆ ಪುರುಷರು ಮತ್ತು ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
96117-44810

**ಮನೆ ಬಾಡಿಗೆಗೆ ಇದೆ**
ದೇವರಾಜ ಅರಸು ಬಡಾವಣೆ, 5ನೇ ಕ್ರಾಸ್, ಹೊಸ ಕೋರ್ಟ್ ಹಿಂಭಾಗ, ದಾವಣಗೆರೆ ಇಲ್ಲಿ 2 ಬಿಹೆಚ್‌ಕೆ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ :
99861 64400

**ಜಮೀನು ಮಾರಾಟಕ್ಕಿದೆ**
ಮಾಗಾನಹಳ್ಳಿ ಕೋಡಿ ಕ್ಯಾಂಪ್ ಮೇನ್ ರೋಡ್ ಪಕ್ಕದಲ್ಲಿ 2.5 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
81868 24508
96184 08086

**ಬೇಕಾಗಿದ್ದಾರೆ.**
ಉಪನ್ಯಾಸಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ. ವಿದ್ಯಾರ್ಹತೆ : M.Sc., M.Com., B.E., (All branches), M.A.(English), M.C.A., etc.
Contact :
90356 38357
90357 34087

**ಕೆಲಸಗಾರರು ಬೇಕಾಗಿದ್ದಾರೆ**
ಪುರುಷ/ಮಹಿಳೆಯರು
ಹೋಟೆಲ್/ಡಾಬಾದಲ್ಲಿ ಸಪ್ಲೈಯರ್, ಕ್ಲೀನರ್, ಕುಕ್ ಬೇಕಾಗಿದ್ದಾರೆ.
89516 67998

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿನೋಬನಗರ, 1ನೇ ಮೇನ್, 1ನೇ ಕ್ರಾಸ್ ನೆಲ ಅಂತಸ್ತಿನ 2 BHK ಪ್ರತ್ಯೇಕ ನೀರಿನ ಸೌಲಭ್ಯ ಹಾಗೂ ನೆಲ ಟ್ಯಾಂಕ್ ಹಾಗೂ ಮೇಲಿನ ಟ್ಯಾಂಕ್ ಇತರೆ ಸೌಲಭ್ಯಗಳುಳ್ಳ ನವೀಕರಣಗೊಂಡ ಉತ್ತರಮುಖದ ವಾಸದ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ :
ಮೊ. : 70197 98686

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿಗೆ ಹುಡುಗರು ಬೇಕಾಗಿದ್ದಾರೆ
ವಿಳಾಸ : ಹಳೇ ಅಂಡರ್ ಬ್ರಿಡ್ಜ್ ಹತ್ತಿರ, ವಸಂತ ರಸ್ತೆ, ಹಾಲೇಶಪ್ಪ ಕಾಂಪ್ಲೆಕ್ಸ್, ದಾವಣಗೆರೆ.
97388 75438

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತಮುತ್ತ ಹಾಗೂ ರಾಣೇಬೇನ್ನೂರಿನಲ್ಲಿ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಊಟ ಮತ್ತು ರೂಂ ಹಾಗೂ ESI, PF ವ್ಯವಸ್ಥೆ ಆಕರ್ಷಕ ಸಂಬಳ ಇರುತ್ತದೆ.
ಮೊ : 96113 94063
ಆಫೀಸ್ : 08192 296709
Safaj Security Sarvise
Vinobanagara, P.B.Road, Davangere

**ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ, ಪ್ರಾಥಮಿಕ ಮತ್ತು ಪ್ರೌಢಶಾಲೆ, ಎಲೆಬೇತೂರು.**
**ಬೇಕಾಗಿದ್ದಾರೆ**
1) ಗಣಿತ ಶಿಕ್ಷಕ / ಶಿಕ್ಷಕಿ (ಬಿ.ಎಸ್ಸಿ., ಬಿ.ಎಡ್.)
2) ವಿಜ್ಞಾನ ಶಿಕ್ಷಕ / ಶಿಕ್ಷಕಿ (ಬಿ.ಎಸ್ಸಿ., ಬಿ.ಎಡ್.)
3) ಇಂಗ್ಲಿಷ್ ಶಿಕ್ಷಕ / ಶಿಕ್ಷಕಿ (ಬಿ.ಎ., ಬಿ.ಎಡ್.)
ಸಂಪರ್ಕಿಸಿ :
91648-67594, 82771-70966

NGO ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ:
MEGHANA ASSOCIATES (R)
99809 16126

**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸ್ ಬಡಾವಣೆ 'ಬಿ' ಬ್ಲಾಕ್, 3ನೇ ಕ್ರಾಸ್, ಮೊದಲನೆಯ ಮಹಡಿಯಲ್ಲಿ 2 ಬೆಡ್‌ರೂಂ ಮನೆ ಹಾಗೂ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು 2ನೇ ಮಹಡಿಯಲ್ಲಿ 1 ಬೆಡ್‌ರೂಂ ಮನೆ ಬಾಡಿಗೆಗೆ ಇದೆ.
94481 25056
73495 98347

**ತಕ್ಷಣ ಬೇಕಾಗಿದ್ದಾರೆ**
IMPULSE marketing ನ ಹೊಸ ವಿಭಾಗಕ್ಕೆ 10th, PUC, ITI, Diploma & Any Degree ಆದ ಯುವಕರು Age (18-24) Earn (8000-16000)PM, 1 photo, Resume & Adhar, Xerox ನೊಂದಿಗೆ ಸಂಪರ್ಕಿಸಿ:
81056 00262
97405 12356

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಕನಿಷ್ಠ SSLC ಪಾಸ್ ಆದ ಮಹಿಳೆಯರು & ಪುರುಷರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ: K.B.R. ಇಂಡಸ್ಟ್ರೀಸ್
K.B.R. ಕಾಂಪ್ಲೆಕ್ಸ್, 109 ಟಿ.ಸಿ.ಲೇಔಟ್ RMC ಲಿಂಕ್ ರೋಡ್, ದಾವಣಗೆರೆ.
94484 42694
63621 47549

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮನು ಸ್ಟುಡಿಯೋ**
ವಿನೋಬನಗರ ದಾವಣಗೆರೆ
ಮದುವೆ ಮತ್ತು ಶುಭ ಸಮಾರಂಭಗಳಿಗೆ ಫೋಟೋ ಮತ್ತು ವಿಡಿಯೋ
99643 78243 / 94483 39151

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ Sales girls / boys ಬೇಕಾಗಿದ್ದಾರೆ.
ಸಂಪರ್ಕಿಸಿ: ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ ದಾವಣಗೆರೆ -1

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET ರೋಡ್ ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.
www.bhoomikamatrimony.com
90080 55813

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467


JOBS
MCS ACADEMY
Training & Placement Cell
98444 92888

GST Registration, INCOME TAX & GST CASES, Project Reports, and for Account Maintenances. Contact
MEGHANA ASSOCIATES (R)
99809 16126

**ಗ್ರಾಮ ಪಂಚಾಯಿತಿಗೆ ಸ್ಪರ್ಧಿಸುವ ಅಭ್ಯರ್ಥಿಗಳ ಕರಪತ್ರ, ಮುದ್ರಣಕ್ಕೆ ಭೇಟಿ ಕೊಡಿ**
**ದೀಪ್ತಿ ಆಫ್‌ಸೆಟ್ ಪ್ರಿಂಟರ್ಸ್**
ಜಯದೇವ ಸರ್ಕಲ್‌ನಿಂದ ನಿಟ್ಟುವಳ್ಳಿ ರಸ್ತೆ, ಶಿಲ್ಪ ಗ್ಯಾರೇಜ್ ಎದುರು, ಉದಯವಾಣಿ ಪೇಪರ್ ಆಫೀಸ್ ಕೆಳಗಡೆ, ದಾವಣಗೆರೆ-02
ಮೊ: 93410 11554


**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

## ಕ್ಯಾದಿಗೆ ಗೌರಮ್ಮ ನಿಧನ



ದಾವಣಗೆರೆ ನಿಟ್ಟುವಳ್ಳಿ ಲೇಬರ್ ಕಾಲೋನಿ, 2ನೇ ಕ್ರಾಸ್‌ವಾಸಿ ದಿ.ಕೆ. ನಾಗಪ್ಪ ಅವರ ಧರ್ಮಪತ್ನಿ ಶ್ರೀಮತಿ ಕ್ಯಾದಿಗೆ ಗೌರಮ್ಮ (90) ಅವರು ದಿನಾಂಕ 13.12.2020 ರಂದು ಭಾನುವಾರ ಸಂಜೆ 4.05ಕ್ಕೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.12.2020 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

## ಮುದಹದಡಿ ಗೌರಮ್ಮ ನಿಧನ



ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ವಾಸಿ ದಿ. ಮಹೇಶ್ವರಪ್ಪ ಇವರ ಧರ್ಮಪತ್ನಿ ಶ್ರೀಮತಿ ಗೌರಮ್ಮ (85) ಅವರು ದಿನಾಂಕ 13.12.2020 ರಂದು ಭಾನುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಆರು ಜನ ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.12.2020 ರಂದು ಸೋಮವಾರ ಬೆಳಿಗ್ಗೆ 10.30ಕ್ಕೆ ಮುದಹದಡಿ ಗ್ರಾಮದ ಅವರ ಜಮೀನಿನಲ್ಲಿ ನೆರವೇರಲಿದೆ.

# ಗೋವಿಂದಾಚಾರ್ಯ ವಿಧಿವಶ

**(1ನೇ ಪುಟದಿಂದ)** ತಮ್ಮ ಸ್ವಗೃಹದಲ್ಲಿ ಕೊನೆಯುಸಿರೆಳೆದಿದ್ದಾರೆ.

ಮಾಧ್ವ ತತ್ವದಲ್ಲಿ ವಿಶೇಷ ಪಾಂಡಿತ್ಯ, ಅನುಭವ ಹೊಂದಿದ್ದ ಡಾ. ಬನ್ನಂಜೆಯವರು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಕೂಡ ಅಷ್ಟೇ ಜ್ಞಾನ ಹೊಂದಿದ್ದರು. ಅನೇಕ ಕೃತಿಗಳನ್ನು, ವ್ಯಾಖ್ಯಾನಗಳನ್ನು, ಅನುವಾದಗಳನ್ನು ರಚಿಸಿದ್ದಾರೆ. 2009ರಲ್ಲಿ ಅವರಿಗೆ ಪದ್ಮಶ್ರೀ ಪ್ರದಾನ ಮಾಡಲಾಗಿತ್ತು.

150ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ ಅವರು, ವೇದ ಭಾಷ್ಯ, ಉಪನಿಷತ್ ಭಾಷ್ಯ, ಮಹಾಭಾರತ, ರಾಮಾಯಣ ಹಾಗೂ ಪುರಾಣಗಳಲ್ಲಿ ಪಾರಂಗತರಾಗಿದ್ದರು. ಹಲವಾರು ಕೃತಿಗಳನ್ನು ಸಂಸ್ಕೃತದದಿಂದ ಕನ್ನಡಕ್ಕೆ ಅನುವಾದಿಸಿದ್ದರು. ಬಾಣ ಭಟ್ಟನ 'ಕಾದಂಬರಿ', ಕಾಳಿದಾಸನ 'ಶಾಕುಂತಲ' ಹಾಗೂ ಶೂದ್ರಕನ 'ಮೃಚ್ಛಕಟಿಕ' ಪ್ರಮುಖ ಅನುವಾದಿತ ಕೃತಿಗಳಾಗಿವೆ. ಕೆಲ ಐತಿಹಾಸಿಕ ಕಾದಂಬರಿಗಳನ್ನೂ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

1979ರಲ್ಲಿ ಅಮೆರಿಕದ ಪ್ರಿನ್ಸ್‌ಟನ್‌ನಲ್ಲಿ ಆಯೋಜಿಸಲಾಗಿದ್ದ ವಿಶ್ವ ಧಾರ್ಮಿಕ ಸಮಾವೇಶದಲ್ಲಿ ಗೋವಿಂದಾಚಾರ್ಯ ಭಾರತದ ಪ್ರತಿನಿಧಿಯಾಗಿದ್ದರು. ಬನ್ನಂಜೆ ಗೋವಿಂದಾಚಾರ್ಯರು ನಾಲ್ವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಅವರ ಪುತ್ರ ಇತ್ತೀಚೆಗೆ ನಿಧನರಾಗಿದ್ದರು.

ಉಡುಪಿ ಜಿಲ್ಲೆಯ ಅಂಬಲಪಾಡಿ ಮೂಲದವರಾದ ಡಾ.ಬನ್ನಂಜೆ 1936ರಲ್ಲಿ ಜನಿಸಿದ್ದರು.

ಕನ್ನಡದ ಹೆಸರಾಂತ ಹಿರಿಯ ನಟ ದಿ. ಡಾ ವಿಷ್ಣುವರ್ಧನ್ ಅವರಿಗೆ ಅಧ್ಯಾತ್ಮಿಕ ಗುರುಗಳಾಗಿದ್ದ ಬನ್ನಂಜೆಯವರು, ಭಾರತೀಯ ತತ್ವಶಾಸ್ತ್ರ, ಹಿಂದೂ ಧರ್ಮಗ್ರಂಥಗಳಲ್ಲಿ ಪ್ರವಚನ ನೀಡುವ ಸಲುವಾಗಿ ದೇಶ, ವಿದೇಶಗಳಲ್ಲಿ ಸಂಚಾರ ಮಾಡುತ್ತಿದ್ದರು.

ಡಾ.ಬನ್ನಂಜೆಯವರು ವೇದ ಭಾಷ್ಯ, ಉಪನಿಷತ್ ಭಾಷ್ಯ, ಮಹಾಭಾರತ, ಪುರಾಣ ಮತ್ತು ರಾಮಾಯಣಗಳಲ್ಲಿ ಅಪಾರ ಜ್ಞಾನ ಹೊಂದಿದ್ದರು. ವೇದ ಸೂಕ್ತ, ಉಪನಿಷತ್, ಶಟ ರುದ್ರೀಯ, ಬ್ರಹ್ಮ ಸೂತ್ರ ಭಾಷ್ಯ, ಗೀತ ಭಾಷ್ಯ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು. ಸಂಸ್ಕೃತ ವ್ಯಾಖ್ಯಾಯನ ಎಂಬ ಸುಮಾರು 4 ಸಾವಿರ ಪುಟಗಳ ಸಮಗ್ರ ಕೃತಿ ರಚಿಸಿದ್ದಾರೆ.. ಶೂದ್ರಕನ ಮೃಚ್ಛಕಟಿಕವನ್ನು 'ಆವೆಯ ಮಣ್ಣಿನ ಆಟದ ಬಂಡಿ' ಎಂದು ಅನುವಾದ ಮಾಡಿದ್ದು ಅದು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡಿತ್ತು. ಮಧ್ವಾಚಾರ್ಯ, ಶಂಕರಾಚಾರ್ಯ ಮತ್ತು ರಾಮಾನುಜಾಚಾರ್ಯ ಎಂಬ ಮೂರು ಕನ್ನಡ ಸಿನಿಮಾಗಳಿಗೆ ಅವರು ಸಂಭಾಷಣೆ ಬರೆದಿದ್ದಾರೆ.

ಡಾ.ಬನ್ನಂಜೆಯವರ ನಿಧನಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವರು ಕಂಬನಿ ಮಿಡಿದಿದ್ದಾರೆ.

## ನಗರದಲ್ಲಿ ಇಂದು ಶನೇಶ್ವರ ಸ್ವಾಮಿ ಹಾಗೂ ನವ ದೇವತೆಗಳ ಲಕ್ಷ ದೀಪೋತ್ಸವ

ಶ್ರೀ ಕೊಪ್ಪದಾಂಬ ಸೇವಾ ಟ್ರಸ್ಟ್ ವತಿಯಿಂದ ಹದಡಿ ರಸ್ತೆಯಲ್ಲಿರುವ ಶನೇಶ್ವರ ಸ್ವಾಮಿ ಹಾಗೂ ನವ ದೇವತೆಗಳ ಲಕ್ಷ ದೀಪೋತ್ಸವವು ಇಂದು ಸಂಜೆ 7 ಗಂಟೆಗೆ ನಡೆಯಲಿದೆ. ಮುಂಜಾನೆ ನವ ದೇವತೆಗಳಿಗೆ ಪಂಚಾಮೃತ ಅಭಿಷೇಕ, ರುದ್ರಾಭಿ ಷೇಕ ಮತ್ತು ಕದಳಿ ಪೂಜೆ ಇರುತ್ತದೆ. ಸಂಜೆ ಲಕ್ಷ ದೀಪೋತ್ಸವ ಜರುಗಲಿದೆ.

# ಶಾಶ್ವತ ಅನುದಾನ ರಹಿತ ಖಾಸಗಿ ಶಾಲೆಗಳ, ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಮನವಿ



ದಾವಣಗೆರೆ, ಡಿ.13- ಶಾಶ್ವತ ಅನುದಾನ ರಹಿತ ಖಾಸಗಿ ಶಾಲೆಗಳ ಹಾಗೂ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಪದವೀಧರ ಕ್ಷೇತ್ರದ ವಿಧಾನ ಪರಿಷತ್ತಿನ ನೂತನ ಸದಸ್ಯ ಚಿದಾನಂದಗೌಡ ಮತ್ತು ವಿಧಾನಪರಿಷತ್ ಸದಸ್ಯ ನಾರಾಯಣಸ್ವಾಮಿ ಅವರುಗಳನ್ನು ಜಿಲ್ಲಾ ಖಾಸಗಿ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿ ಒತ್ತಾಯಿಸಿದೆ.

ಚಿದಾನಂದ ಗೌಡ ಮತ್ತು ನಾರಾಯಣ ಸ್ವಾಮಿ ಅವರುಗಳನ್ನು ಇಂದಿಲ್ಲಿ ಭೇಟಿ ಮಾಡಿದ ಜಿಲ್ಲಾ ಖಾಸಗಿ ಅನುದಾನ ರಹಿತ ಶಾಲೆಯ ಆಡಳಿತ ಮಂಡಳಿಯ ಗೌರವ ಅಧ್ಯಕ್ಷ ಕಂದನಕೋವಿ ಪ್ರಕಾಶ್, ಅಧ್ಯಕ್ಷ ವೀರಭದ್ರ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಅಬ್ದುಲ್ ಮತ್ತಿತರರು ಶೀಘ್ರವೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಂತೆ ಲಿಖಿತ ಮನವಿ ಪತ್ರ ಸಲ್ಲಿಸಿದರು.

## ಬಿಐಇಟಿಯಲ್ಲಿ ಇಂದಿನಿಂದ ಸ್ಟೂಡೆಂಟ್ ಇಂಡಕ್ಷನ್ ಪ್ರೋಗ್ರಾಂ

ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಶ್ರೀ ರಾಮಾನುಜನ್ ಸೆಮಿನಾರ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 19 ರವರೆಗೆ ಪ್ರಥಮ ವರ್ಷದ ಇಂಜಿಯರಿಂಗ್ ವಿದ್ಯಾರ್ಥಿಗಳಿಗೆ ಅಂತರ್ಜಾಲದ ಮೂಲಕ ಸ್ಟೂಡೆಂಟ್ ಇಂಡಕ್ಷನ್ ಪ್ರೋಗ್ರಾಮ್ ಹಮ್ಮಿಕ್ಕೊಳ್ಳಲಾಗಿದೆ. ಇಂದು ಬೆಳಿಗ್ಗೆ 10.30 ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಗ್ಲೋಬಲ್ ಎಡ್ಮ್ ಸಾಫ್ಟ್‌ವೇರ್ ಕಂಪನಿಯ ಉಪಾಧ್ಯಕ್ಷ ಎಸ್.ಜೆ. ನಾಗನಗೌಡ ಮತ್ತು ಕಾಲೇಜಿನ ಪ್ರಾಚಾರ್ಯ ಡಾ.ಹೆಚ್.ಬಿ. ಅರವಿಂದ್ ಮುಖ್ಯಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾಲೇಜಿನ ನಿರ್ದೇಶಕ ಪ್ರೊ. ವೃಷಭೇಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

# 3ನೇ ದಿನವೂ ಸಾರಿಗೆ ನೌಕರರ ಉಪವಾಸ ಸತ್ಯಾಗ್ರಹ



ದಾವಣಗೆರೆ, ಡಿ.13- ಸಾರಿಗೆ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವಂತೆ ಒತ್ತಾಯಿಸಿ ನಗರದಲ್ಲಿ ಕೆಎಸ್‌ಆರ್‌ಟಿಸಿ ನೌಕರರು 3ನೇ ದಿನವಾದ ಇಂದೂ ಸಹ ಮುಷ್ಕರ ನಡೆಸಿದರು.

ಸೇವೆಯಿಂದ ದೂರ ಉಳಿದ ನೌಕರರು, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಧರಣಿ ಹೂಡಿ ಬೇಡಿಕೆ ಈಡೇರಿಕೆಗೆ ಬಿಗಿಪಟ್ಟು ಹಿಡಿದಿದ್ದರು. ಇಂದು ಸಹ ಪಟ್ಟು ಸಡಿಲಿಸದೇ ಬೆಳಗ್ಗೆಯಿಂದ ಸಂಜೆವರೆಗೂ ಉಪವಾಸ ಸತ್ಯಾಗ್ರಹ ನಡೆಸಿ ಅನಿರ್ದಿಷ್ಟ ಮುಷ್ಕರ ತೀವ್ರಗೊಳಿಸಿ ಸರ್ಕಾರದ ಗಮನ ಸೆಳೆದರು.

ಮುಷ್ಕರದಿಂದ ಶುಕ್ರವಾರದಂತೆ ಇಂದೂ ಸಹ ಬಸ್‌ಗಳ ಸಂಚಾರ ಸ್ಥಗಿತಗೊಂಡು ಪ್ರಯಾಣಿಕರು ಬಸ್ ಗಳ ಸೇವೆ ಇಲ್ಲದೇ ಪರದಾಡುವುದು ತಪ್ಪಲಿಲ್ಲ. ದುಪ್ಪಟ್ಟು ಹಣ ಕೊಟ್ಟು ಖಾಸಗಿ ಬಸ್, ಇತರೆ ಖಾಸಗಿ ವಾಹನಗಳಲ್ಲಿ ಸಂಚರಿಸಬೇಕಾಯಿತು.

**ಕಾಂಗ್ರೆಸ್ ಬೆಂಬಲ:** ಸಾರಿಗೆ ನೌಕರರ ಮುಷ್ಕರಕ್ಕೆ ಇಂದು ಸಹ ಜಿಲ್ಲಾ ಕಾಂಗ್ರೆಸ್, ಕನ್ನಡಪರ ಸಂಘಟನೆಗಳು, ರೈತ ಸಂಘಟನೆಗಳ ಮುಖಂಡರು ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ದಿನೇಶ್ ಕೆ. ಶೆಟ್ಟಿ, ಡಿ. ಬಸವರಾಜ್, ಕೆ.ಜಿ. ಶಿವಕುಮಾರ್, ಟಿ. ಶಿವಕುಮಾರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ್ ರಾವ್ ಜಾಧವ್, ದಾಕ್ಷಾಯಣಮ್ಮ ಸೇರಿದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ರೈತ ಸಂಘದ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಶೇಖರ್ ನಾಯ್ಕ, ಕೆಎಸ್‌ಆರ್‌ಟಿಸಿ ನೌಕರರ ಕೂಟದ ಓಂಕಾರಪ್ಪ, ಅಂಜಿನಪ್ಪ, ಅಕ್ಕಿ ಶಿವಕುಮಾರ್, ಸೂಡಂಬಿ ಮಂಜುನಾಥ, ದಾದಾಪೀರ್ ಸೇರಿದಂತೆ ಇತರರು ಇದ್ದರು.

# ದೆಹಲಿಯಂತೆ 'ಮಾದರಿ ಶಾಲೆ'ಗಳ ದತ್ತು ಸ್ವೀಕಾರ

(1ನೇ ಪುಟದಿಂದ) ಚಿದಾನಂದ ಆಯ್ಕೆಯಾಗುವಂತೆ ಮಾಡಿದ್ದಾರೆ ಎಂದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, 1972ರಲ್ಲಿ ಆಗಿನ ಜನಸಂಘವಾಗಿದ್ದ ಬಿಜೆಪಿಯ ಪರವಾಗಿ ಪ್ರಚಾರ ಮಾಡಲು ಹೋದಾಗ ನಿಮಗೆ ಎಂಟು ಮತಗಳೂ ಸಿಗುವುದಿಲ್ಲ ಎಂದು ಜನರು ಹೇಳುತ್ತಿದ್ದರು. ಈಗ ಜಿಲ್ಲೆಯಿಂದಲೇ ಪದವೀಧರ ಕ್ಷೇತ್ರಕ್ಕೆ ಅತಿ ಹೆಚ್ಚು ಮತಗಳು ಸಿಗುತ್ತಿವೆ ಎಂದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ ಮಾತನಾಡಿ, ಪದವೀಧರ ಕ್ಷೇತ್ರದಲ್ಲಿ ಅಭ್ಯರ್ಥಿಯ ಹೆಸರು ಹಾಗೂ ಮುಖ ನೋಡದವರೂ ಬಿಜೆಪಿ ಎಂದು ಮತ ಹಾಕಿರುತ್ತಾರೆ. ಈ ರೀತಿ ಪಕ್ಷದ ಹೆಸರಿನಲ್ಲಿ ಮತ ಪಡೆದು ಗೆದ್ದವರು, ಪಕ್ಷದ ಸಂಘಟನೆ ಬಲಪಡಿಸಲು ಮುಂದಿನ ದಿನಗಳಲ್ಲಿ ಕಾರ್ಯ ನಿರ್ವಹಿಸಬೇಕು ಎಂದರು.

ಮೇಯರ್ ಅಜಯ್ ಕುಮಾರ್ ಮಾತನಾಡಿ, ನಗರದ ಕಾರ್ಪೊರೇಟರ್‌ಗಳು ಅವಿರತವಾಗಿ ಶ್ರಮಿಸುವ ಮೂಲಕ ಪಕ್ಷಕ್ಕೆ ಹೆಚ್ಚಿನ ಮತ ದೊರಕಿಸಿ ಕೊಟ್ಟಿದ್ದಾರೆ. ದಾವಣಗೆರೆಯು ಈಗ ಕಾಂಗ್ರೆಸ್ ಮುಕ್ತ ಭಾರತದತ್ತ ಸಾಗಲಿ ಎಂದರು.

ಪರಿಷತ್ ಸದಸ್ಯ ಡಾ. ವೈ. ಎ. ನಾರಾಯಣಸ್ವಾಮಿ ಮಾತನಾಡಿ, ಪರಿಷತ್‌ನಲ್ಲಿ ಬಿಜೆಪಿಗೆ ಸಂಖ್ಯಾಬಲ ಕಡಿಮೆ ಇತ್ತು. ಪರಿಷತ್‌ನ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರಿಂದ, ಮೇಲ್ಮನೆಯಲ್ಲಿ ಬಿಜೆಪಿ ಸದಸ್ಯರ ಸಂಖ್ಯೆ 31ಕ್ಕೆ ಹೆಚ್ಚಾಗಿ ನಾವು ಅತಿ ದೊಡ್ಡ ಪಕ್ಷವಾಗಿದ್ದೇವೆ. ಇದು ಬಿಜೆಪಿ ಕನಸು, ಅಜೆಂಡಾ ಹಾಗೂ ಪ್ರಣಾಳಿಕೆ ಮುಂದುವರೆಸಲು ನೆರವಾಗಲಿದೆ ಎಂದರು.

ಲಿಡ್ಕರ್ ಅಧ್ಯಕ್ಷ ಹಾಗೂ ಶಾಸಕ ಪ್ರೊ. ಲಿಂಗಣ್ಣ, ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಸುಮತಿ ಜಯಪ್ಪ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬಯಲು ಸೀಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಉಪ ಮೇಯರ್ ಸೌಮ್ಯ ನರೇಂದ್ರ, ಜಿ.ಪಂ. ಪ್ರಭಾರಿ ಅಧ್ಯಕ್ಷೆ ಸಾಕಮ್ಮ ಗಂಗಾಧರ ನಾಯ್ಕ, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಸನ್ನ ಕುಮಾರ್, ಗೌರಮ್ಮ ಗಿರೀಶ್, ಪಾಲಿಕೆ ಸದಸ್ಯರಾದ ಗಾಯತ್ರಿ ಬಾಯಿ, ಸ್ವಾಗಿ ಶಾಂತ ಕುಮಾರ್, ರಾಕೇಶ್ ಜಾಧವ್, ಮುಖಂಡರಾದ ಸಂಗನಗೌಡ್ರು, ಜಗದೀಶ್, ಬಿ.ಎಸ್. ಬಸವರಾಜಪ್ಪ, ರೇಣುಕ ಶ್ರೀನಿವಾಸ್, ಯಶೋದಮ್ಮ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ದಾವಣಗೆರೆಯ ಮತದಾರನಾಗಲು ಅರ್ಜಿ : ಚಿದಾನಂದ

ಚುನಾವಣೆಯಲ್ಲಿ ಗೆಲ್ಲಿಸುತ್ತೇವೆ, ದಾವಣಗೆರೆಯಲ್ಲಿ ಮನೆ ಮಾಡಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದರು. ಅದರಂತೆ ಗೆದ್ದ ನಂತರ ದಾವಣಗೆರೆಯ ಮತದಾರನಾಗಲು ಈಗಾಗಲೇ ಅರ್ಜಿ ಸಲ್ಲಿಸಿದ್ದೇನೆ ಎಂದು ಪರಿಷತ್ ಸದಸ್ಯ ಚಿದಾನಂದ ಗೌಡ ಹೇಳಿದ್ದಾರೆ. ದಾವಣಗೆರೆ ಪಾಲಿಕೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತವಿಲ್ಲ. ನಗರದಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಯಾದ ಜನಪ್ರತಿನಿಧಿಗಳು, ಪಾಲಿಕೆಯಲ್ಲಿ ಮತದಾನ ಮಾಡುವ ಹಕ್ಕು ಪಡೆಯುತ್ತಾರೆ. ಈ ಹಿನ್ನೆಲೆಯಲ್ಲಿ ಚಿದಾನಂದ ನಗರದ ಮತದಾರರ ಪಟ್ಟಿಗೆ ಸೇರ್ಪಡೆಯಾಗುವುದು ಪಾಲಿಕೆಯಲ್ಲಿ ಬಿಜೆಪಿಯ ಸಂಖ್ಯಾಬಲ ಹೆಚ್ಚಿಸಲಿದೆ.

### ಶಾಲೆ ಆರಂಭಕ್ಕೆ ಆಗ್ರಹ

(1ನೇ ಪುಟದಿಂದ) ವಿವಾಹದ ಘಟನೆಗಳು ನಡೆಯುತ್ತಿವೆ. ಮಕ್ಕಳು ಅಂತರ್ಮುಖಿ ಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಶಾಲೆಗ ಳನ್ನು ಬೇಗ ಪ್ರಾರಂಭಿಸಲು ಈಗಾಗಲೇ ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರಿಗೆ ಒತ್ತಾಯಿಸಿದ್ದೇವೆ. ಶಾಲೆ ಬೇಗ ಆರಂಭವಾಗಬೇಕು ಎಂಬುದು ನಮ್ಮ ಪ್ರಯತ್ನವಾಗಿದೆ ಎಂದರು.

ಕೊರೊನಾ ಜೊತೆಗೆ ಜೀವನ ಸಾಗಿಸುವ ಸವಾಲು ಎದುರಿಸಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈಗಾಗಲೇ ತಿಳಿಸಿದ್ದಾರೆ. ಖಾಸಗಿ ಶಾಲೆಗಳನ್ನು ಮುಚ್ಚಿರುವುದರಿಂದ ಅಲ್ಲಿನ ಶಿಕ್ಷಕರ ಜೀವನಕ್ಕೂ ತೊಂದರೆಯಾಗಿದೆ ಎಂದವರು ಹೇಳಿದರು.

ಸರ್ಕಾರ ಖಾಸಗಿ ಶಾಲಾ ಶುಲ್ಕ ಪಾವತಿಸಬಾರದು ಎಂದು ಯಾವುದೇ ಸೂಚನೆ ನೀಡಿಲ್ಲ. ಶಾಲೆಗಳು ಶುಲ್ಕ ಪಡೆಯ ಬಾರದು, ಶಿಕ್ಷಕರಿಗೆ ಸಂಬಳ ಕೊಡಬಾರದು ಎಂದು ಎಲ್ಲಿಯೂ ಹೇಳಿಲ್ಲ. ಬೇಗ ಶಾಲೆ ಆರಂಭಿಸಲು ಹಾಗೂ ಶಿಕ್ಷಕರಿಗೆ ವೇತನ ಕೊಡಲು ಸಚಿವ ಸುರೇಶ್ ಕುಮಾರ್ ಅವರಿಗೆ ಒತ್ತಾಯಿಸುತ್ತೇವೆ ಎಂದರು.

# 'ವಾಲ್ಮೀಕಿ ವಿಜಯ' ಸ್ಮರಣ ಸಂಪುಟಕ್ಕೆ ಸಿದ್ಧತೆ



ಮಲೇಬೆನ್ನೂರು, ಡಿ.13- ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಹೊರ ತರಲಿರುವ 'ವಾಲ್ಮೀಕಿ ವಿಜಯ' ಸ್ಮರಣ ಸಂಪುಟ-3 ರ ಸಂಪಾದಕರನ್ನಾಗಿ ಹರಿಹರದ ಎಸ್.ಜೆ.ವಿ.ಪಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಅವರನ್ನು ಆಯ್ಕೆ ಮಾಡಲಾಯಿತು.

ಈ ಸಂಬಂಧ ಶನಿವಾರ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಕರೆದಿದ್ದ ಸಾಹಿತಿಗಳ, ಬರಹಗಾರರ ಮತ್ತು ಪತ್ರಕರ್ತರ, ಚಿಂತಕರ ಸಭೆಯಲ್ಲಿ ಸ್ಮರಣ ಸಂಪುಟ-3 ರ ಸಂಪಾದಕ ಮಂಡಳಿಯನ್ನು ರಚಿಸಲಾಯಿತು.

ಸಭೆಯ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಒಟ್ಟಾರೆ ಸಮಾಜಕ್ಕೆ ದಿಕ್ಸೂಚಿ ನೀಡುವಂತೆ ಮತ್ತು ನಾಡು-ನುಡಿಗಾಗಿ, ಸಮಾಜಕ್ಕಾಗಿ ಹೋರಾಟ ಮಾಡಿದವರ ಬಗ್ಗೆ ಈಗಿನ ಯುವ ಜನಾಂಗಕ್ಕೆ ತಿಳಿಸುವಂತಹ ವಿಷಯಗಳನ್ನು ಹೊತ್ತು ಸ್ಮರಣ ಸಂಚಿಕೆ ಹೊರಬರಲಿ ಎಂದು ಶುಭ ಹಾರೈಸಿದರು.

ಜನಸಂಖ್ಯೆಗೆ ಅನುಗುಣವಾಗಿ ಎಸ್ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕೆಂಬ ಸಂವಿಧಾನಬದ್ಧ ಹೋರಾಟಕ್ಕೆ ಶೀಘ್ರ ಪ್ರತಿಫಲ ಸಿಗುವ ವಿಶ್ವಾಸವಿದ್ದು, ಸರ್ಕಾರ ನಮ್ಮ ನಿರೀಕ್ಷೆಯಂತೆ ವಾಲ್ಮೀಕಿ ಜಾತ್ರೆ ಒಳಗಾಗಿ ಈಡೇರಿಸಬೇಕೆಂದು ಸ್ವಾಮೀಜಿ ಈ ಮೂಲಕ ಒತ್ತಾಯಿಸಿದರು.

ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಜಿ. ಪ್ರಶಾಂತ್‌ನಾಯಕ, ಹಗರಿಬೊಮ್ಮನಹಳ್ಳಿಯ ಉಪನ್ಯಾಸಕ ಡಾ. ಎಂ. ಕೆ. ದುರುಗಪ್ಪ, ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಡಾ. ಹೆಚ್. ಗುಡ್ಡದೇಶ್ವರಪ್ಪ, ಚಿತ್ರದುರ್ಗದ ಇನ್ನೋರ್ವ ಉಪನ್ಯಾಸಕ ಡಾ. ಜೆ. ಕರಿಯಪ್ಪ ಮಾಳಗಿ, ಹೊಸಪೇಟೆಯ ನಿವೃತ್ತ ಪ್ರಾಚಾರ್ಯ ಡಾ. ಕೆ. ಪನ್ನಂಗಧರ, ಹಂಪಿ ಕನ್ನಡ ವಿವಿಯ ಪ್ರಾಧ್ಯಾಪಕ ಡಾ. ಅಮರೇಶ್ ಯತಗಲ್, ಆರ್.ಕೆ. ಸುಬೇದಾರ್, ಪತ್ರಕರ್ತರಾದ ಭೀಮರಾಯ ಹದ್ದಿನಾಳ ಅವರುಗಳು ಮಾತನಾಡಿದರು.

'ವಾಲ್ಮೀಕಿ ವಿಜಯ' ಸ್ಮರಣ ಸಂಪುಟ-2 ರ ಸಂಪಾದಕರಾಗಿದ್ದ ಹರ್ತಿಕೋಟೆ ವೀರೇಂದ್ರಸಿಂಹ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸ್ಮರಣ ಸಂಪುಟ-3ರ ಸಂಪಾದಕರಾಗಿ ಆಯ್ಕೆಯಾದ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಬರುವ ಜನವರಿ 12ರ ಒಳಗಾಗಿ ಲೇಖನಗಳನ್ನು ಕಳುಹಿಸಿಕೊಡುವಂತೆ ಕೋರಿ ವಿಶೇಷವಾದ ಮತ್ತು ಗ್ರಂಥದ ರೂಪದಲ್ಲಿ ಈ ಸ್ಮರಣ ಸಂಚಿಕೆಯನ್ನು ತಯಾರಿಸಲು ಎಲ್ಲರೂ ಶ್ರಮಿಸೋಣ ಎಂದರು.

ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ, ಹೊಳಲ್ಕೆರೆಯ ಕನ್ನಡ ಉಪನ್ಯಾಸಕ ಎನ್. ಕೆಂಚವೀರಪ್ಪ, 'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್, ಮಾಲತೇಶ್ ಅಂಗವಾರ, ರಾಯಚೂರಿನ ಮಹಾನಂದಿ ನಾಯಕ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

### ಸಂಪುಟದ ಸಂಪಾದಕರಾಗಿ ಡಾ. ಎ.ಬಿ. ರಾಮಚಂದ್ರಪ್ಪ

# ಬಿಲ್ಡಿಂಗ್ ನೀಡ್ಸ್ ನೂತನ ಶೋರೂಂ ಉದ್ಘಾಟನೆ





ದಾವಣಗೆರೆ, ಡಿ.13- ನಗರದ ವರ್ತುಲ ರಸ್ತೆಯ ಶಾರದಾಂಬಾ ವೃತ್ತದಲ್ಲಿ ನೂತನವಾಗಿ ಪ್ರಾರಂಭವಾದ ಬಿಲ್ಡಿಂಗ್ ನೀಡ್ಸ್ ಶೋರೂಂನ ಪೇಂಟ್ ವಿಭಾಗವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಹಾರ್ಡ್‌ವೇರ್ ವಿಭಾಗವನ್ನು ಶಾಸಕ ಎಸ್.ಎ.ರವೀಂದ್ರನಾಥ್ ಅವರು ಉದ್ಘಾಟಿಸಿದರು.

ಮಹಾಪೌರ ಬಿ.ಜಿ.ಅಜಯ್‌ಕುಮಾರ್, ಉದ್ಯಮಿ ಎಸ್.ಎಸ್.ಗಣೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ, ನಗರ ಪಾಲಿಕೆ ಸದಸ್ಯರುಗಳಾದ ದೇವರಮನೆ ಶಿವಕುಮಾರ್, ಶ್ರೀಮತಿ ವೀಣಾ ನಂಜಣ್ಣ, ಎ.ನಾಗರಾಜ್, ಜೆ.ಎನ್.ಶ್ರೀನಿವಾಸ್, ಶಿವನಳ್ಳಿ ರಮೇಶ್, ಕೋಗುಂಡಿ ಬಕ್ಕೇಶಪ್ಪ, ದಿನೇಶ್ ಕೆ.ಶೆಟ್ಟಿ, ಸುರೇಶ್ ಗಂಡುಗಾಳೆ, ಜಯಪ್ರಕಾಶ್, ಕಂಚಿಕೆರೆ ಮಹೇಶ್, ಶ್ರೀನಿವಾಸ್ ಶಿವಗಂಗಾ, ಬೆಲ್ಲದ ಶಂಕರ್, ಅನಿಲ್‌ಗೌಡ ಮತ್ತಿತರರು ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸಂಸ್ಥೆಯ ಶಂಭು ಉರೇಕೊಂಡಿ ಕುಟುಂಬದವರು ಮತ್ತು ಮಹದೇಶ್ವರ ಅವರುಗಳು ಅತಿಥಿ ಗಣ್ಯರನ್ನು ಸತ್ಕರಿಸಿ, ಬೀಳ್ಕೊಟ್ಟರು.

## ದುರ್ಗಾಂಬಾ ಟ್ರಾವೆಲ್ಸ್ ನಿಂದ ನಗರದಿಂದ ಬಿಜಾಪುರಕ್ಕೆ ಬಸ್

ದಾವಣಗೆರೆ,ಡಿ.13-ಶ್ರೀ ದುರ್ಗಾಂಬಾ ಟ್ರಾವೆಲ್ಸ್ ವತಿಯಿಂದ ದಾವಣಗೆರೆ ಮಾರ್ಗವಾಗಿ ಬಿಜಾಪುರಕ್ಕೆ ಬಸ್ ಸೌಲಭ್ಯ ಕಲ್ಪಿಸಲಾಗಿದೆ ಎಂದು ಸಂಸ್ಥೆಯ ಉಮೇಶ್ (94484 15595) ತಿಳಿಸಿದ್ದಾರೆ.

ಪ್ರತಿದಿನ ರಾತ್ರಿ 8 ಗಂಟೆಗೆ ಶಿವಮೊಗ್ಗದಿಂದ ಹೊರಡುವ ಈ ಬಸ್, ಹರಿಹರದಿಂದ ದಾವಣಗೆರೆ ತಲುಪಿ, ರಾತ್ರಿ 10.30ಕ್ಕೆ ಮುಂದೆ ಸಾಗಲಿದೆ. ಹರಪನಹಳ್ಳಿ, ಹೊಸಪೇಟೆ, ಕುಷ್ಟಗಿ, ಇಳಕಲ್, ಹುನಗುಂದ, ಆಲಮಟ್ಟಿ, ನಿಡಗುಂದಿ ಮಾರ್ಗವಾಗಿ ಮುಂಜಾನೆ 6 ಗಂಟೆಗೆ ಬಿಜಾಪುರ ತಲುಪಲಿದೆ.

ವಿವರಕ್ಕೆ ವೀರೇಶ್ (98444 68697), ಕುಮಾರ್ (98807 29049) ಅವರುಗಳನ್ನು ಸಂಪರ್ಕಿಸಬಹುದು.

## ಅಜ್ಜಯ್ಯನ ತೇರು

(1ನೇ ಪುಟದಿಂದ) ಮುಸ್ಲಿಂ ಬಾಂಧವರು ಈ ರಥೋತ್ಸವ ಕಾರ್ಯಕ್ರಮದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಿದ್ದಾರೆ. ಈ ಮಠ ಜಾತಿ, ಮತ, ಭೇದ-ಭಾವವಿಲ್ಲದ ಮಠವಾಗಿ ಎಲ್ಲರಿಗೂ ಪ್ರೇರಣೆಯಾಗಿದೆ ಎಂದು ಶ್ರೀಗಳು ತಿಳಿಸಿದರು.

ಅರಕೆರೆಯ ಶ್ರೀ ಕರಿಸಿದ್ದೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಶ್ರೀಮಠದ ಮಂಜುನಾಥ ಶಾಸ್ತ್ರಿ, ವೀರೇಶ ಶಾಸ್ತ್ರಿ, ವಾಗೀಶ ಶಾಸ್ತ್ರಿ, ಚನ್ನಬಸಯ್ಯ ಶಾಸ್ತ್ರಿ, ನಗರ ಪಾಲಿಕೆ ಸದಸ್ಯೆ ಜಯಮ್ಮ, ಗಂಗಾವತಿಯ ಖಾದ್ರಿ, ಸ್ಫೂರ್ತಿ ಸೇವಾ ಸಂಸ್ಥೆಯ ಎನ್.ಎಸ್. ರಾಜು, ಪ್ರಾಚಾರ್ಯ ಸಿದ್ದಪ್ಪ, ಎನ್.ಪಿ. ರಾಕೇಶ್, ಎ.ಸಿ. ಕರಿಬಸಪ್ಪ, ಮಂಜುನಾಥ, ಬಸವರಾಜ, ಚನ್ನಬಸಪ್ಪ ಗೌಡರು, ಕರಿಸಿದ್ದಪ್ಪ ಮೇಸ್ತ್ರು, ಶರಣಪ್ಪ, ಮಠದ ಭಕ್ತರು, ಮುಸ್ಲಿಂ ಸಮಾಜ ಬಾಂಧವರು ಪಾಲ್ಗೊಂಡಿದ್ದರು.

### ದಿನದ ಚುಟುಕು

ಪರನಿಂದನೆ ಮಹಾ ಪಾಪ
ಅಂಟಿಸಿಕೊಳ್ಳದಿರಿ ಶಾಪ
ಮೇಲಾಟದ ಬದುಕಿಹುದೆಂದು
ತನ್ನತನವನು ಮರೆಯದಿರಿ !!

- ವೀಕೆಎಂ

## ಕಸದ ಗಾಡಿಯವರಿಗೆ ಕಸ ನೀಡುವಂತೆ ನಾಗರಿಕರಲ್ಲಿ ಮನವಿ



ದಾವಣಗೆರೆ, ಡಿ.13- ನಗರದ ಆಂಜನೇಯ ನಾಗರಿಕ ಹಿತ ರಕ್ಷಣಾ ಸಮಿತಿ ವತಿಯಿಂದ ಕಸದ ಗಾಡಿಯವರಿಗೆ ಕಸ ಕೊಡದ ಮನೆಗಳಿಗೆ ಹೋಗಿ ಕಸ ನೀಡುವಂತೆ ಮನದಟ್ಟು ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸಮಿತಿಯ ಅಧ್ಯಕ್ಷರೂ, ಪಾಲಿಕೆ ಸದಸ್ಯ ಎಸ್. ಬಿ. ರುದ್ರಗೌಡ, ಪಾಲಿಕೆ ಸದಸ್ಯರಾದ ಶ್ರೀಮತಿ ವೀಣಾ ನಂಜಣ್ಣ, ಕೆ.ಎಸ್.ಮಂಜುನಾಥ್, ಅರುಣ್, ಕಾಂತಯ್ಯ, ಮಹೇಶ್, ವೆಂಕಟೇಶ್, ಚಂದ್ರಯ್ಯ ಮತ್ತಿತರರು ಭಾಗವಹಿಸಿದ್ದರು.

## ಖಾಸಗಿ ಶಾಲೆ ಒಕ್ಕೂಟಕ್ಕೆ ಮೈನುದ್ದೀನ್



ದಾವಣಗೆರೆ, ಡಿ.13- ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಯ ಒಕ್ಕೂಟದ ಸಂಘಟನಾ ಕಾರ್ಯದರ್ಶಿಯಾಗಿ ಜೆ.ಜೆ. ಕಾನ್ವೆಂಟ್ ಪ್ರೌಢಶಾಲೆಯ ಕಾರ್ಯದರ್ಶಿ ಹೆಚ್. ಜೆ. ಮೈನುದ್ದೀನ್ ನೇಮಕಗೊಂಡಿದ್ದಾರೆ.

## ಆರತಿ ಆನಂದ್ ಚುನಾವಣಾ ವೀಕ್ಷಕ

ದಾವಣಗೆರೆ, ಡಿ.13- ಗ್ರಾಮ ಪಂಚಾಯ್ತಿ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯೋಗದ ಆದೇಶದ ನುಸಾರ ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆರತಿ ಆನಂದ್ (94493 06346) ಅವರನ್ನು ಜಿಲ್ಲೆಯ ಗ್ರಾ.ಪಂ. ಚುನಾವಣಾ ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಬೀಳಗಿ ತಿಳಿಸಿದ್ದಾರೆ.

### ಕೃಷಿ ಕಾಯ್ದೆಗಳ ವಾಪಸ್‌ಗೆ ಆಗ್ರಹ

## ಇಂದು ಅಂಚೆ ಕಚೇರಿಗೆ ಮುತ್ತಿಗೆ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರೈತರಿಗೆ ಮಾರಕವಾಗುವ ಮೂರು ಕರಾಳ ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ದೆಹಲಿಯಲ್ಲಿನ ರೈತರ ಹೋರಾಟಕ್ಕೆ ಬೆಂಬಲಿಸಿ, ದಾವಣಗೆರೆ ಮುಖ್ಯ ಅಂಚೆ ಕಛೇರಿಗೆ ಇಂದು ಮುತ್ತಿಗೆ ಹಾಕಲಾಗುವುದು ಎಂದು ಎಐಟಿ ಯುಸಿ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ಜೆ.ಸಿ.ಟಿ.ಯು. ಜಿಲ್ಲಾಧ್ಯಕ್ಷ ಹೆಚ್. ಕೆ. ರಾಮಚಂದ್ರಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ಜಯದೇವ ವೃತ್ತದ ಬಳಿ ಜೆಸಿಟಿಯು ಕಾರ್ಯಕರ್ತರು ಸೇರಿ ಅಲ್ಲಿಂದ ಪ್ರತಿಭಟನಾ ಮೆರವಣಿಗೆ ಮೂಲಕ ಅಶೋಕ ರಸ್ತೆ, ಮಹಾತ್ಮ ಗಾಂಧಿ ಸರ್ಕಲ್, ಮಂಡಿ ಪೇಟೆ, ಗಡಿಯಾರ ಕಂಬ ರಸ್ತೆ ಮೂಲಕ ಸಾಗಿ ಮುಖ್ಯ ಅಂಚೆ ಕಚೇರಿ ಬಳಿ ಜಮಾಗೊಂಡು ಮುತ್ತಿಗೆ ಹಾಕಿ ಅಲ್ಲಿ ಬಹಿರಂಗ ಸಭೆ ನಡೆಸಲಾಗುವುದು ಎಂದರು.

ಈ ಪ್ರತಿಭಟನೆಯಲ್ಲಿ ಎ.ಐ.ಟಿಯು.ಸಿ., ಸಿ.ಐ.ಟಿ.ಯು., ಎ.ಐ.ಯು.ಟಿ.ಯು.ಸಿ., ಐ.ಎನ್.ಟಿ.ಯು.ಸಿ. , ನೆರಳು ಬೀಡಿ ಕಾರ್ಮಿಕರ ಯೂನಿಯನ್ , ಜನಶಕ್ತಿ ಸಂಘಟನೆಯ ಕಾರ್ಯಕರ್ತರು ಭಾಗವಹಿಸುವರು ಎಂದು ಜೆ.ಸಿ.ಟಿ.ಯು ಜಿಲ್ಲಾ ಸಂಚಾಲಕ ಆವರಗೆರೆ ಚಂದ್ರು ತಿಳಿಸಿದ್ದಾರೆ.


GODOWNS & OFFICE SPACE AVAILABLE ON RENT
AT
RAVI MILLS PREMISES
POONA-BANGALORE ROAD
CONTACT :
M/s R. Hanumanthappa & Son,
# 56/1,2, Hanumanthappa Building,
Poona-Bangalore Road, DAVANGERE-577002.
Phone Nos : (08192) - 258834 / 258836


## ಗಾಂಧಿನಗರದಲ್ಲಿ ಸಾಮೂಹಿಕ ಕಲ್ಯಾಣೋತ್ಸವ

ದಾವಣಗೆರೆ, ಡಿ.13- ಇಲ್ಲಿನ ಗಾಂಧಿನಗರ ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ ಇದೇ ದಿನಾಂಕ 28 ರಂದು 31ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವ ಏರ್ಪಡಿಸಲಾಗಿದೆ.

ವಧು-ವರರಿಗೆ ತಾಳಿ, ರವಿಕೆ, ಸೀರೆ, ಪಂಚೆ ಹಾಗೂ ಉಡುಗೊರೆಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ (99863 28748), ಬಿ.ಎಂ. ರಾಮಸ್ವಾಮಿ (99002 63111) ಅವರುಗಳು ತಿಳಿಸಿದ್ದಾರೆ.


ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,

ನಂ. 7-432, ಕುವೆಂಪು ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ-577 002.
ಫೋ. : 270526, E-Mail : pcardbdvg_26p@yahoo.com

**83ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ನಮ್ಮ ಬ್ಯಾಂಕಿನ 2019-20ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು **ದಿನಾಂಕ 15-12-2020ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಶ್ರೀ ತರಳಬಾಳು ಸಭಾ ಭವನ, ಹದಡಿ ರಸ್ತೆ, ದಾವಣಗೆರೆ-577 005.** ಇಲ್ಲಿ ನಡೆಸಲಾಗುತ್ತಿದ್ದು ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ವಿಶೇಷ ಸೂಚನೆ : ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.**

ಆಡಳಿತ ಮಂಡಳಿ ಪರವಾಗಿ

ಕೆ.ಎಂ. ರೇವಣಸಿದ್ದಪ್ಪ, ಅಧ್ಯಕ್ಷರು
ಎಂ.ಪಿ. ಶಿವಕುಮಾರ್, ಉಪಾಧ್ಯಕ್ಷರು
ಎಸ್. ಸ್ಮಿತಾ ಪಾಟೀಲ್, ವ್ಯವಸ್ಥಾಪಕರು


### ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ.

**ಪಿ.ಅಂಡ್ ಎಸ್.ಪಿ. ನಂ 5/2020**

**ಅರ್ಜಿದಾರರು :** ಶ್ರೀಮತಿ ರಾಜಮ್ಮ ಕೋಂ ಈರಪ್ಪ, ವಯಸ್ಸು 41 ವರ್ಷ, ವಾಸ ಸೋಮನ ಮಲ್ಲಾಪುರ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

**ವಿರುದ್ಧ**

**ಎದುರುದಾರರು :** ಯಾರೂ ಇಲ್ಲ

**ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20, ಹಾಗೂ ಭಾರತೀಯ ವಾರಸಾ ಕಾಯಿದೆ ಕಲಂ 273 ರ ಅಡಿಯಲ್ಲಿ ಸಲ್ಲಿಸಿದ ಸಾರ್ವಜನಿಕ ನೋಟಿಸ್**

ಈ ಮೇಲ್ಕಾಣಿಸಿದ ಅರ್ಜಿದಾರರು ಶ್ರೀಮತಿ ಶಾಂತಮ್ಮ ಕೋಂ ಲೇಟ್ ಬಸಪ್ಪರವರು ದಿನಾಂಕ 24.05.2018 ರಂದು ಹೊನ್ನಾಳಿ ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ಎಸ್.ಆರ್.ನಂ.ಹೆಚ್ ಎನ್‌ಎಲ್ 300024/2018-19ರಲ್ಲಿ ಅರ್ಜಿದಾರರಿಗೆ ಈ ಕೆಳಕಂಡ ಷೆಡ್ಯೂಲ್ ಸೊತ್ತುಗಳಿಗೆ ಸಂಬಂಧಿಸಿದಂತೆ ನೋಂದಾಯಿತ ಮರಣ ಶಾಸನವನ್ನು ಬರೆದಿಟ್ಟು ದಿನಾಂಕ 18.01.2019 ರಂದು ಮರಣ ಹೊಂದಿದ್ದರಿಂದ ಸದರಿ ಮರಣ ಶಾಸನವನ್ನು ಪ್ರೊಬೇಟ್ ಮಾಡಲಿಕ್ಕಾಗಿ ಕೋರಿಕೊಂಡು ಸದರಿ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಸದರಿ ಆಸ್ತಿಯ ಮೇಲೆ ಹಕ್ಕು -ವ- ಹಿತಾಸಕ್ತಿವುಳ್ಳ ಯಾರಾದರೂ ತಮ್ಮ ತಕರಾರನ್ನು ಸಲ್ಲಿಸುವವರು ಇದ್ದರೆ ದಿನಾಂಕ 19.01.2021 ರಂದು ತಾವಾಗಾಗಲೀ ಅಥವಾ ತಮ್ಮ ವಕೀಲರ ಮೂಲಕವಾಗಲೀ ಘನ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬಹುದಾಗಿರುತ್ತದೆ. ಇಲ್ಲದೇ ಇದ್ದಲ್ಲಿ ಯಾರ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಗುವುದು ಎಂದು ಈ ಮೂಲಕ ತಿಳಿಸಲಾದ ಸಾರ್ವಜನಿಕ ನೋಟಿಸು.

**ಷೆಡ್ಯೂಲ್**

ದಾವಣಗೆರ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಕಸಬಾ ಹೋಬಳಿ, ತುಗ್ಗಲಹಳ್ಳಿ ಗ್ರಾಮದ ಸರ್ವೆ ನಂ. 15/3ಬಿ ರಲ್ಲಿ ವಿಸ್ತೀರ್ಣ 2 ಎಕರೆ 01 ಗುಂಟೆ ಖರಾಬು 0.01 ಗುಂಟೆ ವಜಾ ಜಾತಾ ವಿಸ್ತೀರ್ಣ 2 ಎಕರೆ ಆಕಾರ ರೂ. 1.96 ಪೈಸೆವುಳ್ಳ ಜಮೀನು, ಇದಕ್ಕೆ ಚಕ್ಕುಬಂದಿ :-

**ಪೂರ್ವಕ್ಕೆ :** ಮಹಾದೇವಪ್ಪನವರ ತೋಟ **ಪಶ್ಚಿಮಕ್ಕೆ :** ಅಂಕಳಿ ಮಹಾದೇವಪ್ಪನವರ ಜಮೀನು

**ಉತ್ತರಕ್ಕೆ :** ಬಸಪ್ಪನವರ ಜಮೀನು **ದಕ್ಷಿಣಕ್ಕೆ :** ಬಸಪ್ಪನವರ ಜಮೀನು

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 10.12.2020 ರಂದು ಕೊಡಲ್ಪಟ್ಟಿರುತ್ತದೆ.

**ಎಸ್.ಎಂ. ಸಂತೋಷ ಕುಮಾರ್**
ಅರ್ಜಿದಾರರ ಪರ ವಕೀಲರು
ಸ್ಥಳ : ದಾವಣಗೆರೆ ದಿನಾಂಕ ; 10.12.2020

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತಾಧಿಕಾರಿಗಳು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ




ರಿ.ನಂ.:596/2010-11

ಜಂಗಮ ಸೌಹಾರ್ದ ಸಹಕಾರಿ ನಿಯಮಿತ

16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ. ಫೋ. : 08192-233666
E-mail : jangamasouhardadvg@gmail.com

**10ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ,

ನಮ್ಮ ಸಹಕಾರಿಯ 2019-20ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು **ದಿನಾಂಕ 15.12.2020ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಶ್ರೀ ಷ॥ ಬ್ರ॥ ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ (ಶಿವಾಚಾರ್ಯ ನಿಕೇತನ) ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ** ಇಲ್ಲಿ ಸಹಕಾರಿಯ ವಿಶೇಷಾಧಿಕಾರಿಗಳಾದ ಶ್ರೀ ನಟರಾಜ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

**ಕಚೇರಿ ದೂರವಾಣಿ : 08192-233666**
**ಹೊನ್ನಾಳಿ ಶಾಖೆ ದೂರವಾಣಿ : 08188-251666**

ವಿಶೇಷಾಧಿಕಾರಿಗಳ ಪರವಾಗಿ
**ಶ್ರೀಮತಿ ಕವಿತಾ ಜೆ.**
ಮುಖ್ಯ ಕಾರ್ಯನಿರ್ವಾಹಕರು

# ಶಿವ ಸಹಕಾರಿ ಬ್ಯಾಂಕ್‌ಗೆ 3 ಕೋಟಿ ಲಾಭ



**ಬ್ಯಾಂಕಿನ 46ನೇ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಸಂಗಮೇಶ್ವರ ಗೌಡ್ರು ಸಂತಸ**

ದಾವಣಗೆರೆ, ಡಿ.13- ಸದಸ್ಯರ ಸಹಕಾರದಿಂದ ಸದಾ ಅಭಿವೃದ್ಧಿ ಪಥದಲ್ಲಿರುವ ನಗರದ ಶಿವ ಸಹಕಾರಿ ಬ್ಯಾಂಕ್ 2019-20ರ ಆರ್ಥಿಕ ವರ್ಷದಲ್ಲಿ 3.03 ಕೋಟಿ ರೂ. ಲಾಭ ಹೊಂದಿದೆ ಎಂದು ಬ್ಯಾಂಕಿನ ಅಧ್ಯಕ್ಷ ಎಂ.ಬಿ. ಸಂಗಮೇಶ್ವರ ಗೌಡ್ರು ತಿಳಿಸಿದರು.

ನಗರದ ಚಾಮರಾಜಪೇಟೆಯಲ್ಲಿರುವ ಬ್ಯಾಂಕಿನ ಪ್ರಧಾನ ಕಚೇರಿ ಆವರಣದಲ್ಲಿ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಇಂದು ನಡೆದ ಶಿವ ಸಹಕಾರಿ ಬ್ಯಾಂಕಿನ 46ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

22 ಕೋಟಿ 76 ಲಕ್ಷದ 65 ಸಾವಿರದ 599 ರೂ.ಗಳ ಆದಾಯ ಹೊಂದಿದ್ದು, ಇದರಲ್ಲಿ 3.03 ಕೋಟಿ ರೂ. ಲಾಭ ಗಳಿಸಿದ್ದು, ಇದರಲ್ಲಿ 1.01 ಲಕ್ಷ ಆದಾಯ ತೆರಿಗೆ ವಜಾ ಜಾತ 2.02 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ಹೇಳಿದರು.

2019-20ನೇ ಸಾಲಿನಲ್ಲಿ 5,54,40,600 ರೂ. ಷೇರು ಬಂಡವಾಳ ಹೊಂದಿದೆ. ಬ್ಯಾಂಕಿನ ಆರ್ಥಿಕ ಸ್ಥಿರತೆಗೆ ಕಾರಣವಾಗುವ ಆಪದ್ಧನ ಮತ್ತಿತರೆ ನಿಧಿಗಳ ಮೊತ್ತವೂ ಕಳೆದ ಸಾಲಿಗಿಂತ 2,55,91,638 ರೂ.ಗೆ ಅಧಿಕಗೊಂಡು ಪ್ರಸ್ತುತ 21 ಕೋಟಿ 72 ಲಕ್ಷದ 52 ಸಾವಿರದ 582 ರೂ. ಆಗಿದೆ ಎಂದು ಸಂಗಮೇಶ್ವರ ಗೌಡ್ರು ವಿವರಿಸಿದರು.

ಈ ಸಾಲಿನಲ್ಲಿಯೂ 'ಎ' ಶ್ರೇಣಿಯಲ್ಲಿರುವ ಬ್ಯಾಂಕ್, ಮುಂದಿನ ಆರ್ಥಿಕ ವರ್ಷಕ್ಕೂ ನಿರ್ದಿಷ್ಟ ಗುರಿಗಳನ್ನು ಹೊಂದಿದೆ. ಹೆಚ್ಚಿನ ಪ್ರಮಾಣದಲ್ಲಿ ಠೇವಣಿ ಸಂಗ್ರಹಣೆ, ಸಾಲ ಮುಂಗಡಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡುವುದು. ಹಾಗೆಯೇ ಸುಸ್ತಿ ಸಾಲ ವಸೂಲಾತಿ ಹೆಚ್ಚಳ, ಅನುತ್ಪಾದಕ ಆಸ್ತಿ ಪ್ರಮಾಣದ ಇಳಿಕೆ, ಅಗತ್ಯವಿದ್ದಲ್ಲಿ ಬ್ಯಾಂಕಿನ ಶಾಖೆಗಳ ಆರಂಭ, ಇವು ಮುಂದಿನ ವರ್ಷದ ಗುರಿಗಳಾಗಿವೆ. ಗ್ರಾಹಕರಿಗೆ ಎಟಿಎಂ ಕಾರ್ಡ್ ನೀಡುವ ವ್ಯವಸ್ಥೆ ಪೂರ್ಣಗೊಂಡಿದ್ದು, ಬ್ಯಾಂಕಿನ ಗ್ರಾಹಕರು ಎಟಿಎಂ ಕಾರ್ಡ್ ಪಡೆದುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಎ.ಆರ್. ಸಿದ್ದರಾಮಪ್ಪ ಅವರು, ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡಾವಳಿ ವಾಚನ ಮಾಡಿದರು. ನಂತರ ಅನುಮೋದನೆಯನ್ನು ಪಡೆಯಲಾಯಿತು. ಮರಣ ಹೊಂದಿದ ಬ್ಯಾಂಕಿನ ಸದಸ್ಯರುಗಳ ಆತ್ಮಕ್ಕೆ ಇದೇ ವೇಳೆ ಚಿರಶಾಂತಿ ಕೋರಿ ಸಂತಾಪ ಸೂಚಿಸಲಾಯಿತು. ಈ ವಿಷಯವನ್ನು ನಿರ್ದೇಶಕ ಡಿ.ಹೆಚ್. ಪ್ರಭು ನೆರವೇರಿಸಿದರು.

ಸಭೆಯ ವೇದಿಕೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್, ನಿರ್ದೇಶಕರುಗಳಾದ ಕೆ.ಪಿ. ಪ್ರದೀಪ್, ಜಿ. ಸಿದ್ದಪ್ಪ, ಜಿ.ಪಿ. ವಾಗೀಶ್ ಬಾಬು, ಜೆ.ಎಸ್. ಸಿದ್ದಪ್ಪ, ಎನ್. ವಸಂತ, ಡಿ. ನಿರ್ಮಲ, ವೃತ್ತಿಪರ ನಿರ್ದೇಶಕರುಗಳಾದ ಈ. ಚಂದ್ರಣ್ಣ, ಎಸ್. ರಾಜಶೇಖರ್ ಸೇರಿದಂತೆ ಇತರರು ಇದ್ದರು.

ಸುಮಾರು 2 ಸಾವಿರ ಜನ ಬ್ಯಾಂಕಿನ ಸದಸ್ಯರುಗಳು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಸಭೆಯಲ್ಲಿ ಭಾಗವಹಿಸಿದ್ದರು.

ಶಾಖಾ ವ್ಯವಸ್ಥಾಪಕ ಬಿ.ಆರ್. ವೀಣಾ ಪ್ರಾರ್ಥಿಸಿದರು. ನಿರ್ದೇಶಕ ಬಿ.ಎಸ್. ಪ್ರಕಾಶ್ ಸ್ವಾಗತಿಸಿದರು. ಶಾಖಾ ವ್ಯವಸ್ಥಾಪಕ ಜಿ.ಎಂ. ನಾಗಪ್ಪ ನಿರೂಪಿಸಿದರು. ನಿರ್ದೇಶಕ ದೊಗ್ಗಳ್ಳಿ ಎಂ. ಬಸವರಾಜ್ ವಂದಿಸಿದರು.

# 8.89 ಕೋಟಿ ಲಾಭದಲ್ಲಿ ಬಾಪೂಜಿ ಬ್ಯಾಂಕ್

ಸಹಕಾರಿ ಬ್ಯಾಂಕುಗಳಲ್ಲಿ ರಾಜಕೀಯ ವ್ಯಕ್ತಿಗಳು ಇರಬೇಕೇ, ಬೇಡವೇ ಎಂಬ ವಿಚಾರದಲ್ಲಿ; 'ರಾಜಕೀಯದವರಿಗೆ ಒತ್ತಡಗಳಿರುತ್ತವೆ, ನಾಳೆ ಓಟು ಬೀಳ್ತವೋ, ಇಲ್ಲವೋ ಅಂತ ಸಾಲ ನೀಡುತ್ತಾರೆ. ಸಾಲ ತೆಗೆದುಕೊಂಡವನು ಲಾಸ್ ಆಗದಿದ್ದರೆ ಒಳ್ಳೆಯದು, ಇಲ್ಲದಿದ್ದರೆ ಅಸಲು ಬಡ್ಡಿ ಏರುತ್ತಲೇ ಇರುತ್ತದೆ. ಹಾಗಾಗಿ ರಾಜಕೀಯ ವ್ಯಕ್ತಿಗಳು ಒಂದು ರೀತಿಯಲ್ಲಿ ಇದ್ದರೆ ಒಳ್ಳೆಯದು, ಇನ್ನೊಂದು ರೀತಿಯಲ್ಲಿ ಇಲ್ಲದಿದ್ದರೆ ಒಳ್ಳೆಯದು ಇವೆರಡನ್ನೂ ತುಲನೆ ಮಾಡಿ ನೋಡಿದರೆ, ಇಲ್ಲದಿದ್ದರೇ ಒಳ್ಳೆಯದು'.

**- ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು, ಬಾಪೂಜಿ ಬ್ಯಾಂಕ್



ದಾವಣಗೆರೆ, ಡಿ. 13- ಕಳೆದ 51 ವರ್ಷಗಳಿಂದಲೂ ಬಾಪೂಜಿ ಬ್ಯಾಂಕ್ 'ಎ' ಗ್ರೇಡ್‌ನಲ್ಲಿಯೇ ಮುಂದುವರೆದಿದ್ದು, ಜಿಲ್ಲೆಯಲ್ಲಿಯೇ 1ನೇ ಸ್ಥಾನದಲ್ಲಿದೆ. ರಾಜ್ಯದ ಮುಂಚೂಣಿ 10 ಸಹಕಾರಿ ಬ್ಯಾಂಕುಗಳ ಪೈಕಿ ಒಂದೆಂಬ ಹೆಗ್ಗಳಿಕೆ ಸಾಧಿಸಿರುವುದಕ್ಕೆ ಸಹಕಾರಿ ಬಂಧುಗಳ ಸಹಕಾರ, ನಂಬಿಕೆ ಮತ್ತು ವಿಶ್ವಾಸ ಕಾರಣವಾಗಿದೆ ಎಂದು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರೂ ಆದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ನುಡಿದರು.

ನಗರದ ಬಿಐಇಟಿ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಇಂದು ವರ್ಚ್ಯುವಲ್ ಮುಖಾಂತರ ಜರುಗಿದ ಬಾಪೂಜಿ ಬ್ಯಾಂಕಿನ 51 ನೇ ವಾರ್ಷಿಕ ಸಾಮಾನ್ಯ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸದಸ್ಯರಿಗೆ ಈ ವರ್ಷವೂ ಶೇ.18 ಡಿವಿಡೆಂಡ್ ನೀಡಲು ತೀರ್ಮಾನಿಸಲಾಗಿದ್ದು, ರಿಜರ್ವ್ ಬ್ಯಾಂಕು ಲಾಭಾಂಶ ವಿತರಿಸದಂತೆ ಸೂಚಿಸಿದೆ. ಅದರ ಒಪ್ಪಿಗೆ ಬಂದ ಮೇಲೆ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ನಗರದ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಮತ್ತು ಬೆಂಗಳೂರಿನ ರಾಘವೇಂದ್ರ ಬ್ಯಾಂಕ್ ಅನೇಕ ಬ್ಯಾಂಕುಗಳಲ್ಲಿ ದುರ್ವ್ಯವಹಾರ ನಡೆದಿರುವುದರಿಂದ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ಮೇಲೆ ಕೇಸು ಹಾಕಲಾಗಿದೆ. ದಾರಿ ತಪ್ಪಿ ನಡೆದಾಗ ಏನಾಗುತ್ತದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ನಮ್ಮ ಬ್ಯಾಂಕಿನಲ್ಲಿ ಕೆಲಸ ಕೊಟ್ಟು, ಒಳ್ಳೆಯ ಸಂಬಳವನ್ನು ಕೊಟ್ಟಿದ್ದೇವೆ. ನಂಬಿಕೆಗೆ ದ್ರೋಹ ಮಾಡದಂತೆ ಎಲ್ಲರೂ ಕೆಲಸ ಮಾಡಬೇಕು. ಇಲ್ಲದಿದ್ದರೆ ಕ್ರಮಕೈಗೊಳ್ಳುವುದಾಗಿ ನೌಕರರಿಗೆ ಕಠಿಣ ಎಚ್ಚರಿಕೆಯ ಚಾಟಿ ಬೀಸಿದರು.

ನಿರ್ದೇಶಕ ಡಾ.ಎಂ.ಜಿ.ಈಶ್ವರಪ್ಪ ಅವರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್‌ನ 51ನೇ ವಾರ್ಷಿಕ ವರದಿ ಮಂಡಿಸಿದರು. 2019-20ನೇ ಸಾಲಿನಲ್ಲಿ ಒಟ್ಟಾರೆ 8.89 ಕೋಟಿ ರೂ. ಲಾಭ ಗಳಿಸಿದ್ದು, ಆದಾಯ ತೆರಿಗೆ ಮತ್ತು ಇತರೆ ಬಾಬ್ತುಗಳಿಗೆ ಅವಕಾಶ ಕಲ್ಪಿಸಿದ ನಂತರ ರೂ.4.53 ಕೋಟಿ ನಿವ್ವಳ ಲಾಭ ಗಳಿಸಿದೆ. ಈ ಸಾಲಿನಲ್ಲಿ 12.66 ಕೋಟಿ ರೂ. ಷೇರು ಬಂಡವಾಳ, 680.71 ಕೋಟಿ ರೂ. ಠೇವಣಿಗಳು, 269 ಕೋಟಿ ರೂ. ಸಾಲ ಮತ್ತು ಮುಂಗಡ, ಸರ್ಕಾರಿ ಹೂಡಿಕೆಗಳಲ್ಲಿ 487 ಕೋಟಿ ರೂ. ತೊಡಗಿಸಿದ್ದು, ದುಡಿಯುವ ಬಂಡವಾಳ 802 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಅಲ್ಲದೆ ಬ್ಯಾಂಕಿನ ಸ್ವಂತ ಬಂಡವಾಳವೇ ನೂರು ಕೋಟಿಗೇರಿದೆ ಎಂದರು.

ಹಿರಿಯ ನಿರ್ದೇಶಕ ಎ.ಎಸ್.ವೀರಣ್ಣ ಮಾತನಾಡಿ, ಕೊರೊನಾ ನಮ್ಮನ್ನು ಮೆತ್ತಗೆ ಮಾಡಿಬಿಟ್ಟಿದೆ, ಸಾಕಷ್ಟು ಹೊಸ ಪಾಠವನ್ನು ಕಲಿಸಿದೆ. ವರ್ಚ್ಯುವಲ್ ಮೀಟಿಂಗ್ ಬಗ್ಗೆ ನಮಗೆ ಗೊತ್ತೇ ಇರಲಿಲ್ಲ, ಅದನ್ನು ಕಲಿಸಿದೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟ ಸಂದರ್ಭದಲ್ಲಿಯೂ ಬಾಪೂಜಿ ಬ್ಯಾಂಕ್ ಆರ್ಥಿಕವಾಗಿ ಚೇತರಿಕೆ ಕಂಡಿದೆ ಎಂದರು.

ಇಂಚರ ಆರ್.ಮೂರ್ತಿ ಪ್ರಾರ್ಥಿಸಿದರು. ನಿರ್ದೇಶಕರಾದ ಡಾ.ಪಿ.ಶಶಿಕಲಾ ಸ್ವಾಗತಿಸಿದರು. ಡಾ. ಎ.ಅರುಣ್ ಕುಮಾರ್ ವಂದಿಸಿದರು. ಪ್ರಧಾನ ವ್ಯವಸ್ಥಾಪಕ ಜಿ.ವಿ.ಶಿವಶಂಕರ್ ನಿರೂಪಣೆ ಮಾಡಿದರು.


ನಿರ್ದೇಶಕರುಗಳಾದ ಡಾ.ಬಿ.ಪೂರ್ಣಿಮಾ, ಡಾ.ಶಂಶಾದ್ ಬೇಗಂ, ಡಾ.ಕೆ.ಹನುಮಂತಪ್ಪ, ಡಾ.ಬಿ.ಎಸ್. ರೆಡ್ಡಿ, ಡಾ.ಹೆಚ್. ಶಿವಪ್ಪ, ಡಾ.ಸಿ.ವೈ. ಸುದರ್ಶನ್, ಡಾ.ಎಂ.ಎಂ.ಲಿಂಗರಾಜ, ಕೆ. ಬೊಮ್ಮಣ್ಣ, ಕೆ.ಎಸ್.ವೀರೇಶ್ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಸಲಹೆಗಾರರಾದ ಡಿ.ವಿ.ರವೀಂದ್ರ ಮತ್ತು ಎಸ್.ಕಲ್ಲಪ್ಪ, ಶಾಖಾ ವ್ಯವಸ್ಥಾಪಕರಾದ ಜಿ.ಓ.ಶಂಕರಪ್ಪ, ಬಿ.ಜಿ.ಬಸವರಾಜಪ್ಪ, ಎಂ. ಬಸವರಾಜ್, ಶ್ರೀಮತಿ ಶೋಭಾ ಪಾಟೀಲ್, ಕೆ.ಎಂ.ಲಿಂಗೇಶ್, ಡಿ.ಜಿ.ರವಿಶಂಕರ್, ಜಿ.ಬಿ. ಮಂಜುನಾಥ ಪಾಟೀಲ್, ಎಂ.ಎಸ್. ಪ್ರಸನ್ನ, ಪಿ.ಎಸ್. ರವೀಂದ್ರ ಹಾಗು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ಈಚೆಗೆ ಸೇವಾ ನಿವೃತ್ತಿ ಹೊಂದಿದ ಜಿ.ವಿ.ರುದ್ರೇಶ್ ಮತ್ತು ಕೆ.ಎಂ. ಶಿವಾನಂದ ಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

## ನಗರದ ಕಲಾ ಪ್ರಕಾಶ ವೃಂದಕ್ಕೆ ರಮಣಲಾಲ್ ಸಂಘವಿ ಅಧ್ಯಕ್ಷ

### ಕಾರ್ಯದರ್ಶಿಯಾಗಿ ಎಸ್.ಕೆ. ವೀರಣ್ಣ






ದಾವಣಗೆರೆ, ಡಿ.13- ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಹಯೋಗದಲ್ಲಿರುವ ಸಹಕಾರ ಭವನ - ಕಲಾ ಪ್ರಕಾಶ ವೃಂದದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ರಮಣ ಲಾಲ್ ಸಂಘವಿ, ಕಾರ್ಯದರ್ಶಿಯಾಗಿ ಎಸ್.ಕೆ. ವೀರಣ್ಣ, ಉಪಾಧ್ಯಕ್ಷರಾಗಿ ಪೆ.ನಾ. ಗೋಪಾಲರಾವ್, ಸಹ ಕಾರ್ಯದರ್ಶಿಯಾಗಿ ಕೆ. ತಿಮ್ಮಪ್ಪ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಇಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ನಿರ್ದೇಶಕರಾಗಿ ಜಿ.ಕೆ. ಪಂಚಣ್ಣ, ಎಸ್. ಗುರುನಾಥ್, ಎ. ಬಸವರಾಜಯ್ಯ, ಟಿ. ನಿಜಲಿಂಗಯ್ಯ, ಎ. ವೀರೇಶ್, ಶ್ರೀಮತಿ ಬಿ. ಅನುಸೂಯಮ್ಮ, ಎನ್.ಎ. ಮುರುಗೇಶ್, ಕಿರುವಾಡಿ ಸೋಮಶೇಖರ, ಎ.ಹೆಚ್. ಕುಬೇರಪ್ಪ, ಎಸ್.ಕೆ. ಪ್ರಭುಪ್ರಸಾದ್, ಶ್ರೀಮತಿ ಜಯಮ್ಮ ಪರಶುರಾಮಪ್ಪ, ಶ್ರೀಮತಿ ಶಶಿಕಲಾ ರುದ್ರಯ್ಯ, ಕೆ.ಹೆಚ್. ಶಿವಯೋಗಪ್ಪ, ಎಂ. ಶಿವಲಿಂಗಸ್ವಾಮಿ, ಜ್ಯೋತಿಪ್ರಕಾಶ್ ಅವರುಗಳು ಆಯ್ಕೆಯಾಗಿದ್ದಾರೆ.

## ಇಂದು ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಸಹಸ್ರ ದೀಪೋತ್ಸವ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ, ಶ್ರೀ ವಿನಾಯಕ ಸೇವಾ ಸಮಿತಿಯಿಂದ ನಡೆಯುತ್ತಿರುವ ಕಾರ್ತಿಕ ಮಾಸದ ಪೂಜೆಗೆ ಇಂದಿನ ಛಟ್ಟಿ ಅಮಾವಾಸ್ಯೆಯಂದು ತೆರೆ ಬೀಳಲಿದ್ದು, ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.


ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿದ್ದು, ವಿ. ವೀರಭದ್ರರಾವ್ ಕುಟುಂಬದವರು ಪ್ರಧಾನ ಸೇವಾಕರ್ತರಾಗಿರುತ್ತಾರೆ. ಸಂಜೆ 7 ಗಂಟೆಗೆ ಸಹಸ್ರ ದೀಪೋತ್ಸವ, ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿರುತ್ತದೆ.

## ಬಿಜೆಪಿ ಕಾನೂನು ಪ್ರಕೋಷ್ಠದ ಸದಸ್ಯರಾಗಿ ವಕೀಲ ಎ.ಸಿ. ರಾಘವೇಂದ್ರ ನೇಮಕ



ದಾವಣಗೆರೆ,ಡಿ.13- ಬಿಜೆಪಿ ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯರಾಗಿ ನಗರದ ವಕೀಲ ಎ.ಸಿ. ರಾಘವೇಂದ್ರ ಅವರು ನೇಮಕಗೊಂಡಿರುವುದಾಗಿ ಪ್ರಕೋಷ್ಠದ ಸಂಚಾಲಕ ಎಸ್.ಎಸ್. ವಿಟ್ಟಲಕೋಡ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ದಾನಮ್ಮ ದೇವಿ ಜಾತ್ರೆ



ಹಳೇಪೇಟೆ - ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಇಂದು ಶ್ರೀ ದಾನಮ್ಮ ದೇವಿಯ ಜಾತ್ರೋತ್ಸವವನ್ನು ಸರಳವಾಗಿ ಆಚರಿಸಲಾಗುತ್ತದೆ.

ಪ್ರತಿ ವರ್ಷ ನಡೆಯುತ್ತಿದ್ದ ದಂಡಿ - ಉಡಿ ತುಂಬುವ ಕಾರ್ಯಕ್ರಮವು ಈ ವರ್ಷ ಇರುವುದಿಲ್ಲ. ಜಾತ್ರೋತ್ಸವದಂದು ಶ್ರೀ ದಾನಮ್ಮ ದೇವಿಯ ಆಶೀರ್ವಾದದ ಕಂಕಣವನ್ನು ಮಾತ್ರ ಭಕ್ತರಿಗೆ ಕೊಡಲಾಗುವುದು ಎಂದು ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘ ತಿಳಿಸಿದೆ.

ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದ್ದು, ಭಕ್ತಾದಿಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಿದವರಿಗೆ ಮಾತ್ರ ದೇವಸ್ಥಾನದ ಒಳಗೆ ಪ್ರವೇಶ ನೀಡಲಾಗುವುದು ಎಂದು ಸಂಘದ ಪದಾಧಿಕಾರಿಗಳು ಹೇಳಿದ್ದಾರೆ.

## ಬಿಜೆಪಿ ಅಧ್ಯಕ್ಷ ನಡ್ಡಾಗೆ ಕೊರೊನಾ



ನವದೆಹಲಿ, ಡಿ. 13 – ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಕೊರೊನಾ ಸೋಂಕು ಬಂದಿದೆ. ಅವರು ವೈದ್ಯರ ಸಲಹೆಯಂತೆ ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ನಡ್ಡಾ, ನನ್ನ ಆರೋಗ್ಯ ಸ್ಥಿತಿ ಸರಿಯಾಗಿದೆ. ಮನೆಯಲ್ಲಿ ಪ್ರತ್ಯೇಕವಾಗಿದ್ದು ವೈದ್ಯರ ಎಲ್ಲ ಸೂಚನೆಗಳನ್ನು ಪಾಲಿಸುತ್ತಿದ್ದೇನೆ. ಕಳೆದ ಕೆಲ ದಿನಗಳಲ್ಲಿ ನನ್ನ ಸಂಪರ್ಕಕ್ಕೆ ಬಂದ ಎಲ್ಲರೂ ಪ್ರತ್ಯೇಕವಾಗಿರಬೇಕು ಹಾಗೂ ಟೆಸ್ಟ್ ಮಾಡಿಕೊಳ್ಳಬೇಕು ಎಂದವರು ಮನವಿ ಮಾಡಿಕೊಂಡಿದ್ದಾರೆ.

ನಡ್ಡಾ ಅವರು ಇತ್ತೀಚೆಗೆ ಉತ್ತರಾಖಂಡ ಹಾಗೂ ಪಶ್ಚಿಮ ಬಂಗಾಳದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.

## ತಂದೆಯನ್ನೇ ಹತ್ಯೆಗೈದ ಮಗ

ದಾವಣಗೆರೆ,ಡಿ.13-ಮಗನೇ ತನ್ನ ತಂದೆಯನ್ನು ಅಮಾನುಷವಾಗಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ವಡ್ಡಿನಹಳ್ಳಿಯಲ್ಲಿ ಇಂದು ಬೆಳಕಿಗೆ ಬಂದಿದೆ.

ರಾಮಚಂದ್ರಪ್ಪ ಹತ್ಯೆಯಾದ ತಂದೆ. ಸಿದ್ದೇಶ್ ಕೊಲೆಗೈದ ಮಗ. ಮದ್ಯ ವ್ಯಸನಿಯಾಗಿದ್ದ ರಾಮಚಂದ್ರಪ್ಪ ಪದೇ ಪದೇ ಹಣ ನೀಡುವಂತೆ ಪೀಡಿಸುತ್ತಿದ್ದ ಎನ್ನಲಾಗಿದ್ದು, ಇದರಿಂದ ಬೇಸತ್ತ ಮಗ ಸಿದ್ದೇಶ್ ದೊಣ್ಣೆಯಿಂದ ತಲೆಯ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ ಎಂದು ಹೇಳಲಾಗಿದೆ.

ಖಾಸಗಿ ಕಂಪನಿಯೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ಸಿದ್ದೇಶ್ ನಿತ್ಯ ತನ್ನ ತಂದೆಗೆ ಮದ್ಯ ಸೇವನೆಗೆ ಹಣ ನೀಡಿ ಸಾಕಾಗಿದ್ದ. ಈ ವಿಷಯದಲ್ಲಿ ಇಬ್ಬರ ಮಧ್ಯೆ ಪದೇ ಪದೇ ಜಗಳವಾಗುತ್ತಿತ್ತು ಎನ್ನಲಾಗಿದೆ.

ಹೊಲದಲ್ಲಿದ್ದ ರಾಮ ಚಂದ್ರಪ್ಪನ ಹಿಂಬದಿಯಿಂದ ಬಂದ ಸಿದ್ದೇಶ್ ದೊಣ್ಣೆಯಿಂದ ತಲೆಗೆ ಹೊಡೆದಾಕ್ಷಣ ಗಂಭೀರ ವಾಗಿ ಗಾಯಗೊಂಡ ರಾಮಚಂದ್ರಪ್ಪ ಕುಸಿದು ಬಿದ್ದಿದ್ದು, ಇದನ್ನು ಗಮನಿಸಿದ ಸ್ಥಳೀಯರು ಗಾಯಾಳು ರಾಮಚಂದ್ರಪ್ಪನನ್ನು ದಾವಣಗೆರೆ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಸದೇ ಮೃತಪಟ್ಟಿದ್ದಾನೆ.

ಗ್ರಾಮಾಂತರ ಠಾಣೆ ಪೊಲೀಸರು ಆರೋಪಿ ಸಿದ್ದೇಶ್‌ನನ್ನು ಬಂಧಿಸಿದ್ದಾರೆ.

## ಕೊರೊನಾ : ಗುರುವಾಯೂರು ದೇವಾಲಯ ಎರಡು ವಾರ ಬಂದ್

ಗುರುವಾಯೂರು (ಕೇರಳ), ಡಿ. 13 – ಕೇರಳದ ತ್ರಿಸ್ಸೂರು ಜಿಲ್ಲಾಡಳಿತವು ಇಲ್ಲಿನ ಪ್ರಸಿದ್ಧ ಶ್ರೀ ಕೃಷ್ಣ ದೇವಾಲಯವನ್ನು ಕೊರೊನಾ ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಎರಡು ವಾರಗಳ ಕಾಲ ಭಕ್ತರು ದೇವಾಲಯಕ್ಕೆ ಬರಲು ಅವಕಾಶವಿರುವುದಿಲ್ಲ. ಗುರುವಾಯೂರು ದೇವಸ್ಥಾನದ ಆಡಳಿತ ಸಮಿತಿ ಶುಕ್ರವಾರ ಕರೆದಿದ್ದ ತುರ್ತು ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಭಕ್ತರಿಗೆ ಪ್ರವೇಶ ಇರದಿದ್ದರೂ, ದೇವಾಲಯದ ಸಂಕೀರ್ಣದೊಳಗೆ ನಿತ್ಯ ಪೂಜಾ ವಿಧಿ ವಿಧಾನಗಳು ಎಂದಿನಂತೆ ಮುಂದುವರೆಯಲಿವೆ.

ಶುಕ್ರವಾರದಂದು ದೇವಾಲಯದ 22 ಉದ್ಯೋಗಿಗಳಿಗೆ ಕೊರೊನಾ ಸೋಂಕಿರುವುದು ಪತ್ತೆಯಾಗಿದೆ ಎಂದು ದೇವಾಲಯದ ಮೂಲಗಳು ಹೇಳಿವೆ. ಗುರುವಾಯೂರಿನಲ್ಲಿ ಶುಕ್ರವಾರ 272 ಜನರಿಗೆ ಸೋಂಕಿರುವುದು ಪತ್ತೆಯಾಗಿತ್ತು. ಮೊನ್ನೆ ಮಂಗಳವಾರ 393 ಜನರಲ್ಲಿ ಸೋಂಕಿರುವುದು ಕಂಡು ಬಂದಿತ್ತು.

## ವೀರೇಶ್ವರ ಪುಣ್ಯಾಶ್ರಮ ನಾಳೆ ಕಾರ್ತಿಕ

ದಾವಣಗೆರೆ, ಡಿ.13- ಬಾಡಾ ಕ್ರಾಸ್ ಬಳಿಯಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಡಿದ್ದು ದಿನಾಂಕ 15 ರ ಮಂಗಳವಾರ ಸಂಜೆ ಕಾರ್ತಿಕ ಮಹೋತ್ಸವ ನಡೆಯಲಿದೆ ಎಂದು ಆಶ್ರಮದ ಪ್ರಧಾನ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ ತಿಳಿಸಿದ್ದಾರೆ.


**ನಾಲ್ಕನೇ ವರ್ಷದ ಪುಣ್ಯ ಸ್ಮರಣೆ**



ಶರಣ ಶ್ರೀಯುತ
ದಿ|| ಎ.ಎಂ. ರುದ್ರಪ್ಪನವರು
ನಿವೃತ್ತ ಉದ್ಯೋಗಾಧಿಕಾರಿಗಳು
ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ನೀವು ತೋರಿದ ಹಾದಿ ನಮಗೆ ಮಾರ್ಗದರ್ಶನವಾಗಿದೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ...
ದುಃಖ ತಪ್ತ ಕುಟುಂಬ ವರ್ಗ


## ನಗರದಲ್ಲಿ ಇಂದು ವಿಕಲಚೇತನರ ಸಭೆ

ಸಂಕಲ್ಪ ಸಂಸ್ಥೆಯಿಂದ ಇಂದು ವಿಕಲಚೇತನರ ಸಭೆಯನ್ನು ಮಹಾರಾಜ ಪೇಟೆ ಶ್ರೀ ವಿಠ್ಠಲ ಮಂದಿರದಲ್ಲಿ ನಡೆಯಲಿದೆ. ವಿವರಗಳಿಗೆ ಸಂಪರ್ಕಿಸಿ : 76766 33025, 63614 27927.


**48ನೇ ವರ್ಷದ ಮುನ್ನಡೆ**

**ಪ್ರಕಾಶ ಟಿವಿ ಸೆಂಟರ್**

21, ಮುರುಘರಾಜೇಂದ್ರ ಕಾಂಪ್ಲೆಕ್ಸ್
ಹದಡಿ ರೋಡ್, ದಾವಣಗೆರೆ. ಫೋನ್ : 254565

13.12.2020ಕ್ಕೆ ನಮ್ಮ ಸಂಸ್ಥೆ ಪ್ರಕಾಶ ಟಿವಿ ಸೆಂಟರ್ 48ನೇ ವರ್ಷಕ್ಕೆ ಮುನ್ನಡೆಯುತ್ತಿದೆ. ಇದಕ್ಕೆಲ್ಲಾ ಕಾರಣ ನಮ್ಮ ಗ್ರಾಹಕರು, ಸ್ನೇಹಿತರು, ಹಿತ ರಕ್ಷಕರು, ಬಂಧುಗಳು ನೀಡಿದ ಸಹಕಾರವೇ ವಿನಹ ಬೇರೇನೂ ಅಲ್ಲ. ತಮ್ಮೆಲ್ಲರ ಆಶೀರ್ವಾದ ಮುಂದೆಯೂ ಇರಲಿ ಎಂದು ನಮ್ಮ ಕಳಕಳಿಯ ಮನವಿ. ತಮಗೆಲ್ಲಾ ಧನ್ಯವಾದಗಳು ಮತ್ತು ತಮ್ಮ ಮುಂದಿನ ದಿನಗಳೂ ಸಹ ಸುಖ, ಸಂತೋಷದಿಂದ ತುಂಬಿರಲಿ ಎಂದು ಪ್ರಾರ್ಥಿಸುತ್ತೇವೆ.

ಪ್ರಕಾಶ ಟಿವಿ ಸೆಂಟರ್ ಬಳಗದವರು







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte